॥धर्मो रक्षति रक्षितः॥

# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. 33 No. 03 JANUARY 2024 Pages 16 Rs. 2/-




**FORTHCOMING EVENTS :**

**PICNIC on Sunday, 21st January 2024 at D N Patil Farm, Badlapur**

**KARKI VENKATARAMAN SHASTRI SURI AWARD PRESENTATION CEREMONY on Sunday, 10th March 2024 at Shree Kutch Deshiya Saraswat Brahmin Mahasthan Trust, Mulund West**

*PAGE DONATED BY : PROFESSIONAL COURIERS WESTERN & CENTRAL REGION, COURTESY : SHRI RAMESH G. HEGDE, MADAPPAN, KARKI, DADAR T. T.*

**"Havyaka Sandesha"** is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina,
Vidyanagari P. O. Mumbai - 400 098.

| | | |
|---|---|---|
| *Hon. Editor* | : | Smt. Amita S. Bhagwat |
| *Editorial Committee* | | Smt. Shashikala Hegde<br>Smt. Tanuja Hegde<br>Shri Ganesh Bhat<br>Smt. Shailaja Hegde |
| *Publisher* | : | Narayan Akadas R. |
| *Printed at* | : | M/s. Navin Printers<br>Mumbai - 400 016.<br>✆ 2430 8316 |


**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2023-2024**

| | | |
|---|---|---|
| *President* | : | Shivkumar P. Bhagwat |
| *Vice - President* | : | Vishnu Bhagwat |
| *Hon. Gen. Secretary* | : | Vasant Bhat |
| *Hon. Jt. Secretary* | : | G. V. Hegde |
| *Hon. Treasurer* | : | Ganesh Bhat |

***Elected Members :***

| | |
|---|---|
| Narayan Akadas | Umesh Hegde |
| Sanjay Bhat | Prakash Bhat |
| Smt. Tanuja Hegde | Prakash Hegde |
| Smt. Shashikala Hegde | N. K. Hegde |
| Ramana Bhat | |

***Co-opted Members :***

Chandrashekhar Joshi, Nagaraj Bhat

***ಸಂಪಾದಕೀಯ***

# ಸಮತೋಲನ ಕಾಪಾಡಿಕೊಳ್ಳೋಣ



ಇಂಗ್ಲಿಷ್ ಕ್ಯಾಲೆಂಡರ್ ಇರಲಿ ಅಥವಾ ಹಿಂದೂ ಪಂಚಾಂಗವೇ ಆಗಲಿ ಭೂಮಿಗೆ ಸೂರ್ಯನ ಸುತ್ತಲೂ ತಿರುಗಲು ಬೇಕಾಗುವ ಕಾಲಾವಧಿಯು ಬದಲಾಗದು. ವರ್ಷಗಳೇ ಉರುಳಿದರೂ ಪೃಥ್ವಿಯು ಆದಿತ್ಯನನ್ನು ಸುತ್ತುವ ಮಾರ್ಗ ಬದಲಾಗುತ್ತಿಲ್ಲ. ಒಂದು ಗಳಿಗೆಯೂ ವಿಶ್ರಾಂತಿ ಬಯಸದೇ ತನ್ನ ಪ್ರದಕ್ಷಿಣೆಯನ್ನು ಮುಂದುವರಿಸಿಕೊಂಡು ಹೋಗುವ ಭೂಮಿಯನ್ನು ಯಾವ ಆಕರ್ಷಣೆಯ ಸೂತ್ರವು ಬಂಧಿಸಿರಬಹುದು?

ಹುಟ್ಟು ಸಾವುಗಳೆಂಬ ಕೊಂಡಿಯಿಂದ ಬಿಗಿಯಲ್ಪಟ್ಟರೂ, ಜೀವನವು ಸದಾ ಚಲಿಸುತ್ತಿರುವಂತೆ ಇಂಧನವನ್ನು ನೀಡುವ ಶಕ್ತಿ ಯಾವುದು? ಚಲಿಸುವ ಗಾಡಿಯಿಂದ ನೋಡಿದಾಗ ವಿವಿಧ ದೃಶ್ಯಗಳು ಕಾಣುವಂತೆ ನಮ್ಮ ಜೀವನದಲ್ಲಿಯೂ ವಿವಿಧ ಸಂಗತಿಗಳು ಘಟಿಸುತ್ತವೆ. ಯಾವ ಕಾರಣಕ್ಕೋ ಏನೋ ಮಳೆಯ ಹನಿಗಳ ಸ್ಪರ್ಶದಿಂದ ನವಿಲು ಗರಿಕೆದರಿ ನರ್ತಿಸುತ್ತದೆ. ಹುಟ್ಟಿದೊಡನೆ ಸಿಗುವ ಪಾಲಕರ ಪ್ರೀತಿ, ವಿದ್ಯಾಭ್ಯಾಸದ ನಂತರ ಜೀವನ ನಿರ್ವಹಣೆಗೆಂದೇ ಭುಜಕ್ಕೇರಿಸಿಕೊಂಡ ಕೆಲಸದೊಂದಿಗೆ ಬಾಂಧವ್ಯ, ಮದುವೆಯ ಬಂಧ, ಮಕ್ಕಳ ಮೇಲೆ ವಾತ್ಸಲ್ಯ ಮೊದಲಾದುವುಗಳ ಬೆಸುಗೆಯೊಂದಿಗೆ ಜೀವನ ಚಕ್ರವು ಸುದೃಢವಾಗಿ, ಬದುಕು ಮುಗ್ಗರಿಸದಂತೆ ಮುನ್ನಡೆಯುತ್ತದೆ. ಪ್ರತಿದಿನ ಸೂರ್ಯೋದಯವಾದೊಡನೆ, ಆಗಸದಲ್ಲಿ ಬಣ್ಣಗಳು ಓಕುಳಿಯಾಡಿದಂತೆ ದೈನಂದಿನ ಚಟುವಟಿಕೆಗಳು ಯಾಂತ್ರಿಕವಾಗದೇ ಜೀವನವು ರಸಭರಿತವಾಗುತ್ತದೆ. ಜೀವನ ಪ್ರೀತಿಯು ನಮ್ಮನ್ನು ಬೆಚ್ಚಗಿಡುತ್ತದೆ.

ಹಾಗೆಂದು ಜೀವನವು ಸದಾ ವರ್ಣರಂಜಿತವಾಗಿರುವುದಿಲ್ಲ. ಆಗಸದ ನೀಲಿಯನ್ನು ಕಪ್ಪು ಮೋಡಗಳು ನುಂಗಿದಂತೆ, ಮನಸಿನ ನೆಮ್ಮದಿಯನ್ನು ಕೆಡಿಸಲೆಂದೇ ಹೊಂಚು ಹಾಕಿ ಎರಗಿವೆಯೇನೋ ಎಂದು ದಿಗ್ಭ್ರಮೆ ಹುಟ್ಟಿಸುವಂತಹ ಅನೇಕ ಸಂಗತಿಗಳು ಜೀವನದ ಭಾಗವಾಗುತ್ತವೆ. ಆಕರ್ಷಣೆ ಎಷ್ಟು ಸಹಜವೋ ಹಾಗೆಯೇ ವಿಕರ್ಷಣೆಯೂ ಜೀವನದ ಭಾಗ ಎನ್ನುವುದು ನಾವು ಒಪ್ಪಿಕೊಳ್ಳಲೇ ಬೇಕಾದ ಸತ್ಯ. ಯಾವ ಕಾರಣ ಇಲ್ಲವಾದರೂ, ನಾಗರಹಾವನ್ನು ಕಂಡೊಡನೆ ಮುಂಗುಸಿ ಮಣ್ಣನ್ನು ಕಾಲಿನಿಂದ ಕೆದರಿ ಕದನಕ್ಕೆ ಸನ್ನದ್ಧವಾಗುತ್ತದೆ. ಆರೋಗ್ಯಕ್ಕೆ ಪೂರಕವಾದ ವಿಟಾಮಿನ್‌ಗಳಿಂದ ಸಮೃದ್ಧ ಹಣ್ಣುಗಳು ಕೂಡಾ ಕೆಲವರಿಗೆ ಅಲರ್ಜಿ. ಬೇರೆಯವರ ಏಳಿಗೆಯನ್ನು ನೋಡಿ ಈರ್ಷೆ ಪಡುವ, ಸುಳ್ಳು ವದಂತಿಗಳನ್ನು ಹಬ್ಬಿಸುವ ಜನರಿಂದ ದೂರವಿರುವ ಬಯಕೆಯಾಗುತ್ತದೆ. ಕುಕರ್ಮಿಗಳ ಬಗ್ಗೆ ಉಂಟಾಗುವ ಭೀತಿ ನಮ್ಮನ್ನು ಎಚ್ಚರಿಸಿ ಮುಂಜಾಗ್ರತೆ ವಹಿಸಲು ಪ್ರೇರೇಪಿಸುತ್ತದೆ. ಒಂದು ನಾಣ್ಯಕ್ಕೆ ಎರಡು ಮುಖಗಳಿದ್ದರೆ, ನಮ್ಮ ಜೀವನಕ್ಕೆ ವಿವಿಧ ಮಗ್ಗಲುಗಳಿವೆ.

ಆಕರ್ಷಣೆ, ಸೆಳೆತ ಹಾಗೂ ಅದಕಂಟಿಕೊಂಡ ಪ್ರೀತಿ ಝುಳು ಝುಳು ಎಂದು ಹರಿಯುವ ನೀರಿನಂತೆ ಸಹಜವಾಗಿರಬೇಕು. ನೀರಿನ ರಭಸ ಹೆಚ್ಚಾದರೆ, ನೆರೆಯಾಗಿ ಹಾವಳಿಯನ್ನುಂಟು ಮಾಡುವಂತೆ, ಪ್ರೀತಿಯು ಅತಿಯಾದರೆ, ಮೋಹವಾಗಿ ಅತಿರೇಕಕ್ಕೆ ಎಡೆಕೊಡುತ್ತದೆ. 'ಅತಿ ಸರ್ವತ್ರ ವರ್ಜಯೇತ್' ಎನ್ನುವ ಗಾದೆ ಮಾತು ಅನುಭವದ ತಳಹದಿಯ ಮೇಲೆ ರಚಿತವಾಗಿದೆ. ಯಾವ ವ್ಯಕ್ತಿಯನ್ನಾಗಲೀ ಅಥವಾ ವಿಷಯವನ್ನಾಗಲೀ ನಮಗೆ ಸಹಿಸಲು ಶಕ್ಯವಾಗದಿದ್ದರೆ ನಾವು ಅವುಗಳಿಂದ ದೂರ ಉಳಿಯುವುದು ಜಾಣತನ. ಆದರೆ ನಾವು ದ್ವೇಷದ ಭಾವನೆಯನ್ನು ಸರ್ವಥಾ ಬೆಳೆಸಿಕೊಳ್ಳಬಾರದು.

ತನ್ನ ಸುತ್ತ ತಿರುಗುತ್ತ ಸೂರ್ಯನ ಸುತ್ತ ತಿರುಗುವ ಭೂಮಿ ಸಮತೋಲನವನ್ನು ಎಂದೂ ಕಳೆದುಕೊಂಡಿಲ್ಲ. ಪೃಥ್ವಿಯ ಮೇಲೆ ನಾನು, ನನ್ನವರು ಎನ್ನುವ ಸಾಮ್ರಾಜ್ಯವನ್ನು ಕಟ್ಟಿಕೊಳ್ಳುವ ನಾವೂ ಆ ಸೂತ್ರಕ್ಕೆ ಬದ್ಧರಾಗಿರಬೇಕಲ್ಲವೇ?

***ಹೊಸ ವರುಷ ಹರುಷವನ್ನು ತರಲಿ.***

ಅಮಿತಾ ಎಸ್ ಭಾಗವತ್

e-mail : amitabhagwat@gmail.com

# ಮಾಸ ಮಹಾತ್ಮ್ಯ

✍ ಗಣಪತಿ ಭಡ್ತಿ

*(ಕಳೆದ ಸಂಚಿಕೆಯಿಂದ)*

ದೇಹದಿಂದ ಭಿನ್ನನಾಗಿ ನಿತ್ಯನಾದ ಆತ್ಮನಿದ್ದಾನೆಂದೂ, ಮರಣಾನಂತರ ಸಹ ಅವನಿಗಾಗಿ ಮಾಡಬೇಕಾದ ಕೆಲವು ಸಂಸ್ಕಾರಗಳಿರುವವೆಂದೂ ನಮ್ಮ ಧರ್ಮತತ್ವವಿರುವದರಿಂದ ಅಂತ್ಯೇಷ್ಟಿ, ಶ್ರಾದ್ಧ ಮೊದಲಾದವುಗಳು ಪ್ರಚಾರದಲ್ಲಿ ಬಂದಿರುತ್ತವೆ. ಮೃತನಿಗೆ ಹತ್ತು ದಿನಗಳವರೆಗೆ ಕೊಡುವ ಪಿಂಡಾದಿಗಳಿಂದ ಪ್ರೇತಶರೀರವುಂಟಾಗುವದೆಂದೂ, ಜನ್ಮಹೊಂದಿದವನಿಗೆ ಷೋಡಶ ಸಂಸ್ಕಾರಗಳಿರುವಂತೆ ಮೃತನಿಗೆ ಷೋಡಶ ಶ್ರಾದ್ಧ ಸಪಿಂಡೀಕರಣಗಳನ್ನು ಮಾಡುವುದರಿಂದ ಒಂದು ವರ್ಷದೊಳಗೆ ಪ್ರೇತತ್ವವು ಹೋಗಿ ಪಿತೃತ್ವವು ಬರುವುದೆಂದೂ ಗರುಡಪುರಾಣದಲ್ಲಿ ಹೇಳಿದೆ. 'क्षीणे पुण्ये मर्त्यलोकं विशन्ति' ಎಂಬ ವಚನದಿಂದ ದೇಹತ್ಯಾಗ ಮಾಡಿದ ಆತ್ಮನು ತನ್ನ ಪುಣ್ಯಕರ್ಮಫಲವನ್ನನುಭವಿಸಿ ಪಾಪಕರ್ಮ ಫಲಭೋಗಕ್ಕಾಗಿ ಪುನಃ ಜನ್ಮಹೊಂದುವನೆಂಬ ಅಂದರೆ ಪುನರ್ಜನ್ಮವಿರುವದೆಂಬ ಭಾವನೆಯು ಹಿಂದೂಧರ್ಮಿಗಳಲ್ಲಿ ಮಾತ್ರ ಇರುತ್ತದೆ. ದೇಹತ್ಯಾಗ ಮಾಡಿದ ನಂತರ ಆತ್ಮನ ಸ್ಥಿತಿಯ ಬಗ್ಗೆ ಪ್ರಾಚೀನ ಮಹರ್ಷಿಗಳಿಗೆ ಕಂಡು ಬಂದದ್ದು ಉಪನಿಷತ್ತುಗಳಲ್ಲಿದೆ. ಈ ವಿಷಯದಲ್ಲಿ ಛಾಂದೋಗ್ಯ, ಬೃಹದಾರಣ್ಯಕಗಳಲ್ಲಿ ಹೇಳಿದ್ದನ್ನು ಸಂಕ್ಷೇಪದಿಂದ ಈ ಕೆಳಗೆ ಬರೆದಿದೆ-

ಆತ್ಮನು ಹೋಗುವ ಮಾರ್ಗವು ದೇವಯಾನ, ಪಿತೃಯಾನ ಎಂಬೆರಡು ವಿಧವಾಗಿದೆ. ಯಾವವನು ಇಹ-ಪರಲೋಕಗಳ ಫಲಭೋಗಗಳ ಇಚ್ಛೆಯನ್ನು ಬಿಟ್ಟು ಕೇವಲ ಕರ್ತವ್ಯಬುದ್ಧಿಯಿಂದ ನಿತ್ಯ-ನೈಮಿತ್ತಿಕ ಕರ್ಮಾಚರಣೆಗಳನ್ನೂ, ಆತ್ಮನಿಷ್ಠೆಗಾಗಿ ತಪಸ್ಸನ್ನೂ ಆಚರಿಸುವನೋ ಅವನು ಹೋಗುವ ಮಾರ್ಗಕ್ಕೆ ದೇವಯಾನವೆನ್ನುವರು. ಈ ಮಾರ್ಗದಿಂದ ಹೋಗುವವನು ಅಗ್ನಿ, ತೇಜಸ್ಸು, ದಿವಸ, ಶುಕ್ಲಪಕ್ಷ, ಉತ್ತರಾಯಣ, ಸಂವತ್ಸರ, ಆದಿತ್ಯಲೋಕ, ಚಂದ್ರಲೋಕ, ವಿದ್ಯುಲ್ಲೋಕ, ಬ್ರಹ್ಮಲೋಕ ಈ ಕ್ರಮದಿಂದ ಹೋಗುವನು. ಅಂತು ಇವನ ಮಾರ್ಗವು ಪ್ರಕಾಶ ಮಾನವಾದದ್ದು. ಇವನಿಗೆ ಪುನರ್ಜನ್ಮವಿಲ್ಲ; ಆದರೆ ಇಂಥ ಬ್ರಹ್ಮನಿಷ್ಠನು ತನ್ನ ಇಷ್ಟವಿದ್ದರೆ ಮಾತ್ರ ಜಗದ ಅನುಗ್ರಹಕ್ಕಾಗಿ ಪುನಃ ಜನ್ಮಹೊಂದಿದ್ದು ಕಂಡು ಬರುತ್ತದೆ. ಇಂಥವರೇ ಅವತಾರಿಕ ಪುರುಷರೆನಿಸುವರು. ಪುನರ್ಜನ್ಮಕ್ಕಾಗಿ ಮುಂದೆ ವಿವರಿಸುವ ಐದು ಪಾಕಗಳಲ್ಲಿ ಮೂರನೆಯ ಅಥವಾ ನಾಲ್ಕನೆಯ ಪಾಕದಲ್ಲೇ ಇವರು ಜನ್ಮತಾಳಿದ್ದೂ ಉಂಟು. ವಸಿಷ್ಠ, ಅಗಸ್ತ್ಯ, ಸೀತಾ, ದ್ರೌಪದಿ, ದ್ರೋಣ ಮುಂತಾದವರೇ ಇದಕ್ಕೆ ಉದಾಹರಣೆಯಾಗಿದ್ದಾರೆ.

ಇಹ-ಪರಲೋಕಗಳ ಸುಖೋಪಭೋಗದ ಇಚ್ಛೆಯಿಂದ ಕರ್ಮ ಮಾಡುವವರು ಪಿತೃಯಾನದಿಂದ ಹೋಗುವರು. ಇವರು ಧೂಮ, ರಾತ್ರಿ, ಕೃಷ್ಣಪಕ್ಷ, ದಕ್ಷಿಣಾಯನ, ಪಿತೃಲೋಕ, ಆಕಾಶ, ಚಂದ್ರಲೋಕ ಈ ಕ್ರಮದಿಂದ ಹೋಗಿ ಚಂದ್ರಲೋಕದಲ್ಲಿ ತಮ್ಮ ಪುಣ್ಯಕರ್ಮಫಲವನ್ನನುಭವಿಸುತ್ತಿರುವರು. ಇವರು ತಮ್ಮ ಪಾಪಕರ್ಮಫಲಭೋಗಕ್ಕಾಗಿ ಪುನಃ ಜನ್ಮ ಹೊಂದಲೇಬೇಕಾಗುವದು. ದೇವಯಾನದಿಂದ ಹೋದವರಿಗೆ ಪಾಪಕರ್ಮಫಲ ಭೋಗವಿಲ್ಲದ್ದರಿಂದ ಪುನರ್ಜನ್ಮವಿಲ್ಲ. ಪುನರ್ಜನ್ಮ ಹೊಂದುವಾಗ ತಮ್ಮ ವಾಸನಾನುರೂಪವಾದ ಯೋನಿಯನ್ನು ಪಡೆಯುವರು. ಆತ್ಮನು ಜಲಪ್ರಧಾನವಾದ ಪಂಚಭೂತ ತತ್ವಗಳನ್ನವಲಂಬಿಸಿ ಚಂದ್ರಲೋಕಕ್ಕೆ ಹೋಗುವನು. ಜಲವು ಉಗಿಯಾಗಿ ಹಗುರಾಗಬೇಕಾದರೆ ಅದಕ್ಕೆ ಅಗ್ನಿಯ ಸಹಾಯವು ಬೇಕಾಗುವದೆಂಬದು ಸಹಜವು. ದಹನಕಾಲಕ್ಕೆ ಉಪಯೋಗಿಸಿದ ಅಗ್ನಿಯಾಗಲಿ, ಭೂಮಿಯಲ್ಲಿ ಸ್ವಾಭಾವಿಕವಾಗಿರುವ ಅಗ್ನಿಯಾಗಲಿ ಈ ಕಾರ್ಯಕ್ಕೆ ನೆರವಾಗುವದು. ಇದರಿಂದಲೇ ದಹನಕ್ಕೆ ಮುಖ್ಯತ್ವ ಬಂದಿದೆಯೆಂದು ತೋರುತ್ತದೆ.



'ಚಂದ್ರಲೋಕದಲ್ಲಿ ಜಲವನ್ನವಲಂಬಿಸಿ, ವಾಸನಾಮಯ-ಲಿಂಗ-ಶರೀರದಿಂದಿರುವ ಆತ್ಮನು ಪುನರ್ಜನ್ಮಹೊಂದುವಾಗ पञ्चम्यामाहुतावाप : पुरुष वचसो भान्ति'ಎಂಬ ಛಾಂದೋಗ್ಯದ ಉಕ್ತಿಯಂತೆ ಐದು ವಿಧವಾದ ಪಾಕಗಳನ್ನು ಹೊಂದಿ ಭೂಲೋಕದಲ್ಲಿ ಜನಿಸುವನು. ಚಂದ್ರಲೋಕದಿಂದ ಆದಿತ್ಯರೂಪೀ ಅಗ್ನಿಯಲ್ಲಿ ದೇವತೆಗಳಿಂದ ಅಹುತಿ ಮಾಡಲ್ಪಟ್ಟವನಾಗಿ (ಆದಿತ್ಯ ಕಿರಣಗಳಿಂದ ಆಕರ್ಷಿಸಲ್ಪಟ್ಟವನಾಗಿ) ಆ ಪರಿಪಾಕದಿಂದ ಮನಸ್ತತ್ವ ಯುಕ್ತವಾದ ಸೋಮರಸ (ಚಾಂದ್ರರಸ) ದಲ್ಲಿ ಸೇರುವನು. ಈ ಸೋಮ ರಸವು ಪರ್ಜನ್ಯ (ವಿದ್ಯುತ್) ರೂಪವಾದ ಅಗ್ನಿಯಲ್ಲಿ ಹವನ ಹೊಂದುವದು. ಇದು ಎರಡನೇ ಪಾಕವು. ಇದರಿಂದ ವೃಷ್ಟಿಯಾಗುವದು. ಈ ವೃಷ್ಟಿರೂಪದಲ್ಲಿರುವ ಜೀವನು ಪೃಥ್ವಿರೂಪವಾದ ಅಗ್ನಿಯಲ್ಲಿ ಹೋಮಿಸಲ್ಪಡುವನು (ಬೀಳುವನು.) ಈ ಮೂರನೇ ಪಾಕದಿಂದ ಅನ್ನವಾಗುವದು. ಈ ಅನ್ನರೂಪ ಜೀವನು ಪುರುಷರೂಪವಾದ ನಾಲ್ಕನೇ ಅಗ್ನಿಯಲ್ಲಿ ಪಾಕ ಹೊಂದಿ ರೇತೋರೂಪವನ್ನು ಧರಿಸುವನು. ಈ ರೇತೋರೂಪಿಯಾದ ಜೀವನು ಸ್ತ್ರೀ ರೂಪವಾದ ಐದನೇ ಅಗ್ನಿಯಲ್ಲಿ ಆಹುತಿಯಾಗಿ (ಗರ್ಭಾದಾನ ಹೊಂದಿ) ಸಾಕ್ಷಾಜ್ಜನ್ಮ ಪಡೆಯುವನು.

ಚಂದ್ರಲೋಕಕ್ಕೆ ಹೋದ ಪಿತೃಗಳು ಅಲ್ಲಿಯ ಅಮೃತಾನ್ನದಿಂದ ಜೀವಿಸುತ್ತಿರುವರು. ಕೃಷ್ಣಪಕ್ಷದಲ್ಲಿ ಚಂದ್ರನ ಕಲೆಯು ಕ್ಷೀಣವಾಗುವುದರಿಂದ ಅಂದರೆ ಪಿತೃಗಳಿಗೆ ಅನ್ನದ ಕೊರತೆಯಾಗುವುದರಿಂದ ಈ ಕೃಷ್ಣಪಕ್ಷದಲ್ಲಿ ಪಿತೃಗಳಿಗೆ ಪಿಂಡ, ತಿಲೋದಕಗಳಿಂದ ಅನ್ನವನ್ನು ಕೊಡಬೇಕಾಗುವುದು. ಇದಲ್ಲದೆ ಪಿತೃಯಾನಕ್ರಮದಲ್ಲಿ ಕೃಷ್ಣಪಕ್ಷವಿರುವುದರಿಂದ ಸಹ ಕೃಷ್ಣಪಕ್ಷವು ಪಿತೃಕಾರ್ಯಕ್ಕೆ ಪ್ರಶಸ್ತವಾಗಿದೆ. ಇದಲ್ಲದೆ ಕೃಷ್ಣಪಕ್ಷದ ಅಷ್ಟಮಿಯ ಉತ್ತರಾರ್ಧದಿಂದ ಶುಕ್ಲಪಕ್ಷದ ಅಷ್ಟಮಿಯ ಪೂರ್ವಾರ್ಧದವರೆಗೂ ಹಗಲೆಂದು ಹೇಳಿದೆ. (ಅಮರಕೋಶ ಕಾಲವರ್ಗ 21ನೇ ಶ್ಲೋಕದ ಮಾಹೇಶ್ವರೀಟೀಕೆ ನೋಡುವುದು.) ಇದರಿಂದ ಅಮಾವಾಸ್ಯೆಯು ಅವರಿಗೆ ಮಧ್ಯಾಹ್ನವಾಗುವುದು. ಕಾರಣ ಅಮಾವಾಸ್ಯೆಯ ದಿನ ದರ್ಶಶ್ರಾದ್ಧದ ವಿಧಿಯಿರುತ್ತದೆ.

ಪಿತೃಯಾನ ಕ್ರಮದಲ್ಲಿ ರಾತ್ರಿಯಿರುವುದರಿಂದಲೇ ರಾತ್ರಿಯ ಸಮೀಪದ ಅಪರಾಹ್ನ ಕಾಲವನ್ನು ಶ್ರಾದ್ಧಕ್ಕೆ ಮುಖ್ಯ ಕಾಲವನ್ನಾಗಿ ವಿಧಿಸಿರಬೇಕು. ಇದರಂತೆ ದಕ್ಷಿಣಾಯನವಾದರೂ ಈ ಯಾನದಲ್ಲಿದೆ. ಆಷಾಢ ಕೃಷ್ಣ ಪಕ್ಷದಿಂದ ಐದನೇಯದಾದ ಭಾದ್ರಪದ ಕೃಷ್ಣಪಕ್ಷವು ಸಾಧಾರಣ ದಕ್ಷಿಣಾಯನದ ಮಧ್ಯಕಾಲವಾಗಿದೆ. ಹಾಗೂ ಚಾಂದ್ರಮಾನದಲ್ಲಿ ಭಾದ್ರಪದವು ಆರನೆಯದೂ, ಕನ್ಯಾಸಂಕ್ರಾಂತಿಯು ಸೌರಮಾಸದಲ್ಲಿ ಆರನೆಯದೂ ಆಗಿದೆ. ಈ ಮಧ್ಯಕಾಲಗಳ ಸಂಬಂಧಕ್ಕೆ ವಿಶೇಷ ಪ್ರಾಶಸ್ತ್ಯ ಕೊಟ್ಟಿದ್ದು ಕಂಡುಬರುತ್ತದೆ. ಈ ಪಿತೃಪಕ್ಷದಲ್ಲಿ ಯಾವತ್ತೂ ಪಿತೃಗಳು ಶ್ರಾದ್ಧದ ಆಸೆಯಿಂದಲೇ ಭೂಲೋಕಕ್ಕೆ ಬರುವರೆಂದೂ, ವೃಶ್ಚಿಕ ಸಂಕ್ರಾಂತಿಯವರೆಗೆ ನೋಡಿ ಆವರೆಗೂ ಶ್ರಾದ್ಧ ಮಾಡದಿದ್ದರೆ ನಿರಾಸೆ ಹೊಂದಿ ತಮ್ಮ ಕುಟುಂಬದವರನ್ನು ಶಪಿಸಿ ಹೋಗುವರೆಂದೂ ಹೇಳಿದೆ.

*(ಮುಂದುವರಿಯುವುದು)*

*PAGE DONATED BY : **HEGDE HOSPITAL, CHEMBUR**, COURTESY : **DR. DINESH HEGDE***

# ನಾಕುತಂತಿ ಕವನದ ಶೈಲಿ ಹಾಗೂ ದಾರ್ಶನಿಕತೆ

✍ ಡಾ. ಶೈಲಜಾ ಹೆಗಡೆ, ಮುಂಬಯಿ

*(ಕಳೆದ ಸಂಚಿಕೆಯಿಂದ)*

ಕವಿತೆಯ ಪ್ರಥಮ ಭಾಗವು ಐದು ಚರಣಗಳಿಂದ ಕೂಡಿದೆ. ಪದ್ಯದ ಮೊದಲ ಚರಣದಲ್ಲಿ ಧ್ವನಿ ಅಥವಾ ನಾದದ ಮಹಿಮೆಯನ್ನು ಬಣ್ಣಿಸಲಾಗಿದೆ. ಅಪಸ್ವರವಾಗದಂತೆ ಶೃತಿಬದ್ಧ ನಡಿಗೆಯಲ್ಲಿ ಜೀವನ ಸಾಗಬೇಕು. ಅಪಸ್ವರದಿಂದ ವಿರಸ. ಬಾಳು ಸಮರಸವಾಗಬೇಕಾದರೆ, ನಾಲ್ಕು ತಂತಿಯ ಸ್ವರಗಳೂ ಒಂದಕ್ಕೊಂದು ಪೂರಕವಾಗಿರಬೇಕು. ಸಾಧುಪ್ರಾಣಿ ಗೋವಿನ(ಆವು) ದೃಷ್ಟಾಂತದಿಂದ ತತ್ವವನ್ನು ನಿರೂಪಿಸಲಾಗಿದೆ. ಬಯಸಿದ್ದನ್ನು ನೀಡುವ ಕಾಮಧೇನು ಗೋವು. ಈ ಜಗತ್ತೆಂಬ ಗೋವು ಈದದ್ದರಿಂದ ನಾವು ನೀವುಗಳ ಉತ್ಪತ್ತಿಯಾಗಿದೆ. ಜಗತ್ತು ಮತ್ತು ಜೀವಾತ್ಮಗಳಿಗೆ ಪರಮಾತ್ಮ ಎಂಬ ಹಿಮ್ಮೇಳದ ಹಿನ್ನೆಲೆಯಿದೆ. ಸೃಷ್ಟಿಯ ಹಿಂದೆ ಪ್ರಸವ ವೇದನೆಯೂ ನಿಗೂಢವಾಗಿದೆ. ಅದನ್ನು 'ಜಾಣೆನಾ' ಎಂದು ಕವಿ ಎರಡನೆಯ ಚರಣದಲ್ಲಿ ನುಡಿಯುತ್ತಾರೆ. ಬೇನೆಯ ಮೂಲವನ್ನು ಹುಡುಕುವ ಜಿಜ್ಞಾಸೆಯೂ ಇಲ್ಲಿ ವ್ಯಕ್ತವಾಗಿದೆ. ಪ್ರತಿಯೊಂದು ಆನಂದದ ಹಿಂದೆ ಒಂದು ನೋವಿರುವುದನ್ನು ಕವಿ ಸೂಚಿಸಿದ್ದಾರೆ. ಮಗುವಿನ ಜನನದ ಹಿಂದೆಯೂ ಪ್ರಸವದ ವೇದನೆಯಿದೆ. ಇಲ್ಲಿ ಕವಿ ಬೇಂದ್ರೆಯವರು ಕಾವ್ಯ ರಚನೆಯನ್ನೂ ಪ್ರಸವಕ್ಕೆ ಹೋಲಿಸಿರುವುದನ್ನು ನೆನೆಯಬಹುದು. ಅದೇರೀತಿ, ಮೂರನೆಯ ಚರಣದಲ್ಲಿ, ಸುಂದರವಾದ ವೀಣಾ ತಂತಿಯ; ಪದ ಪದದಲ್ಲೂ, ಚರಣ ಚರಣದಲ್ಲೂ, ಪಾದ ಪಾದದಲ್ಲೂ ದೃಢವಾದ ಅಥವಾ ಘನ ಘನವೆಂಬ ಶೃತಿಬದ್ಧನಾದ, ಚಾರುತಂತಿಯ ಏಕತ್ರಿತ ಧ್ವನಿ ಪ್ರತಿಧ್ವನಿತವಾಗಿದೆ ಎಂಬುದು ಚಿತ್ರಿತವಾಗಿದೆ. ಇಲ್ಲಿ ವಿಶ್ವವನ್ನೇ ಸುಸ್ವರವಾಗಿಸುವ ಕವಿಯ ಆಶಯ ವ್ಯಕ್ತವಾಗಿದೆ. ಚರಣ ನಾಲ್ಕರಲ್ಲಿ, ಹತವೋ ಹಿತವೋ ಆ ಅನಾಹತಾ ಮಿತಿ ಮಿತಿಗೆ ಇತಿ ನನನನಾ, ಎಂದು ಕವಿ ಅನಾಹತ ನಾದವನ್ನು ಬಣ್ಣಿಸಿದ್ದಾರೆ. ಆ ಅನಾಹತದ ನಿಜವಾದ ಅನುಭವ ಹಿತವಾದದ್ದು. ಅದು ನಮ್ಮನ್ನು ಆನಂದದಿಂದ ನಲಿದಾಡುವಂತೆ ಮಾಡುತ್ತದೆ ಎಂಬುದನ್ನು ನನನನಾ ಶಬ್ದ ಸೂಚಿಸುತ್ತದೆ. ಶಾಶ್ವತ ಮತ್ತು ಅಶಾಶ್ವತ, ಹಿತ ಮತ್ತು ಅಹಿತ, ಆಹತ ಮತ್ತು ಅನಾಹತ ಇವುಗಳ ಸಹಜ ಬೆಸುಗೆಯನ್ನು, ಅವುಗಳ ಮಹತ್ವವನ್ನು ಕವಿ ಅರ್ಥಪೂರ್ಣವಾಗಿ ವಿಷದೀಕರಿಸಿದ್ದಾರೆ. ಅಣು ಅಣುವಿನಲ್ಲಿಯೂ ವ್ಯಾಪಿಸಿದ ಅಮಿತವಾದ ಅನಾಹತ ನಾದ ಕೇವಲ ಅನುಭವದಿಂದ ವೇದ್ಯವಾಗುವುದು. ಐದನೆಯ ಚರಣದಲ್ಲಿ, ಅನಾಹತ ನಾದ ಹಾಗೂ ಜನನದ ಬೆನ್ನಿನಾನಿಕೆಯಾಗಿ ಪರಬ್ರಹ್ಮವಿದೆ. ಅದನ್ನು ತಿಳಿಯಲು ಚಿಂತನ ಮತ್ತು ಮನನದ ಅಗತ್ಯವಿದೆ. ಆ ಚಿಂತನ, ಮನನವೇ ಪ್ರತಿಧ್ವನಿತವಾಗಿ ವಿಸ್ತಾರವಾದ ವಿಶ್ವದ ವ್ಯಾಪಕ ಚಿಂತನೆಗೆ ತೊಡಗಿಸುತ್ತದೆ. ಕ್ರಮೇಣ ಅದು ಅನಾಹತ ನಾದದಲ್ಲಿ ವಿಲೀನಗೊಳಿಸುತ್ತದೆ. ಅಥವಾ ಪರಬ್ರಹ್ಮ ಸ್ವರೂಪದಲ್ಲಿ ಒಂದಾಗುವಂತೆ ಮಾಡುತ್ತದೆ. ವ್ಯಷ್ಟಿರೂಪದ ಶರೀರದಲ್ಲಿರುವ ನಾದದ ಸೂಕ್ಷ್ಮರೂಪ ಸಮಷ್ಟಿಯ ಸ್ಥೂಲ ರೂಪವನ್ನು ತಾಳುವ ಪ್ರಕ್ರಿಯೆಯನ್ನು ಇಲ್ಲಿ ಸೊಗಸಾಗಿ ನಿರೂಪಿಸಲಾಗಿದೆ. ಈ ಮೊದಲ ಭಾಗದ ಕೊನೆಯ ಚರಣದ ಆಶಯವನ್ನು ಡಾ. ಕೃಷ್ಣಪ್ಪ ಅವರು ತಮ್ಮ 'ನಾಕುತಂತಿ' ಕವಿತೆಯ ಕುರಿತು ಬರೆದ ಟಿಪ್ಪಣಿಯಲ್ಲಿ, 'ಜನಪದರ ಆಧ್ಯಾತ್ಮ ಭಾವವನ್ನು ಅಭ್ಯಾಸ ಮಾಡಿದಾಗ ಅವರು 'ದೀಪವನ್ನು ಆರಿಸು' ಎಂದು ಹೇಳದೆ 'ದೀಪವನ್ನು ತುಂಬು' ಎಂದು, 'ದೀಪವನ್ನು ದೊಡ್ಡದು ಮಾಡು' ಎಂದು ಹೇಳುವುದನ್ನು ಕಾಣುತ್ತೇವೆ. ಈ ನುಡಿಗಟ್ಟುಗಳು ಅಪಾರ ಅಧ್ಯಾತ್ಮದ, ಅನುಭಾವದ ಅರ್ಥವನ್ನು ಹೊಂದಿವೆ. ಈ ಎರಡು ನುಡಿಗಟ್ಟುಗಳಿಗೆ 'ಈ ಖಂಡಜ್ಯೋತಿಯನ್ನು ಆ ದೊಡ್ಡ ಜ್ಯೋತಿಯೊಡನೆ ಸೇರಿಸು' ಎಂದೂ'ಈ ಸಣ್ಣ ಜ್ಯೋತಿಯನ್ನು ಆ ದೊಡ್ಡ ಜ್ಯೋತಿಯೊಡನೆ (ಪರಂಜ್ಯೋತಿಯೊಡನೆ) ಒಂದುಗೂಡಿಸು' ಎಂದೂ ಅರ್ಥವಾಗುತ್ತದೆ. ಅಧ್ಯಾತ್ಮ ಚಿಂತನೆಯಲ್ಲಿ ತೊಡಗಿದ ವ್ಯಕ್ತಿ ಆತ್ಮಚಿಂತನೆಯ ತನ್ನ ಒಳದನಿಗೆ ಕಿವಿಗೊಡುತ್ತ, ಕೇಳಿದ ಹೊರನುಡಿಯನ್ನು ಕುರಿತು ವಿಚಾರ ಮಾಡುತ್ತಾ ಅವುಗಳ ಸತ್ಯಶೋಧನೆಗೆ ತೊಡಗುತ್ತಾನೆ. ಅದು 'ಮನನವೇ ಸಹಿತಸ್ತನಾ' ಅಲ್ಲಿ ಮಾತು ಕೊನೆಗೊಂಡು ಆತ್ಮ ಮನೋಮಯವಾಗಿ ಜ್ಞಾನದ ಸಾಸ್ವಾದದತ್ತ ಸಾಗುತ್ತದೆ. ಮಾತಿನ ಹಂತವನ್ನು ದಾಟಿದ ಆತ್ಮದ ಚಿಂತನೆ ಮನೋಮಯವಾಗಿ ವಿಚಾರ, ಜ್ಞಾನ, ರಸ ಸಂಚಯದತ್ತ ಸಾಗುತ್ತದೆ. ಹಾಗೆ ಅನುಭವವಾದ ಆತ್ಮರೂಪಿ ಜ್ಞಾನರಸವು ವಿಶ್ವವ್ಯಾಪಕವಾದ ಬ್ರಹ್ಮವನ್ನು ಹುಡುಕುತ್ತಾ ಸಾಗುತ್ತದೆ. ಅದು ವಿಶ್ವದ ಒಳಿತನ್ನು ಚಿಂತಿಸುತ್ತ ವಿಶ್ವವ್ಯಾಪಿಯಾಗಿ ವಿಕಾಸಶೀಲವಾದಾಗ ಆ 'ಅನು'ವಿನಿಂದ ಇದೆಲ್ಲಾ ಸಾಧ್ಯವಾಗಿದೆ ಎಂಬ ಅರಿವಿಗೆ ಬರುತ್ತದೆ. ಇದು ಈ ಕಾವ್ಯ ಭಾಗದ ಧ್ವನಿ ಎಂದು ಹೇಳಬಹುದು" ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



೨

| | |
|---|---|
| ಗೋವಿನ ಕೊಡುಗೆಯ | ಸಲಿಗೆಯ ಸುಲಿಗೆಯ |
| ಹಡಗದ ಹುಡುಗಿ | ಬಯಕೆಯ ಒಲುಮೆ |
| ಬೆಡಗಿಲೆ ಬಂದಳು | ಬಯಲಿನ ನೆಯ್ಗೆಯ |
| ನಡುನಡುಗಿ; | ಸಿರಿಯುಡುಗಿ; |
| ನಾಡಿಯ ನಡಿಗೆಯ | ಮುಟ್ಟದ ಮಾಟದ |
| ನಲುವಿನ ನಾಲಿಗೆ | ಹುಟ್ಟದ ಹುಟ್ಟಿಗೆ |
| ನೆನೆದಿರೆ ಸೋಲುವ | ಜೇನಿನ ಥಳಿಮಳಿ |
| ಸೊಲ್ಲಿನಲಿ; | ಸನಿಹ ಹನಿ; |
| ಬೆಚ್ಚಿದ ವೆಚ್ಚವು | ಭೂತದ ಭಾವ |
| ಬಸುರಿನ ಮೊಳಕೆ | ಉದ್ಭವ ಜಾವ |
| ಬಚ್ಚಿದ್ದಾವುದೊ | ಮೊಲೆ ಊಡಿಸುವಳು |
| ನಾ ತಿಳಿಯೆ. | ಪ್ರತಿಭೆ ನವ. |

ಕವಿತೆಯ ಎರಡನೆಯ ಭಾಗವಾದ ಮೇಲಿನ ಸಾಲುಗಳಲ್ಲಿ ನಾಕು ತಂತಿ ಕವನದ ತತ್ವಗಳನ್ನು ಹಲವು ಪ್ರತಿಮೆಗಳ ಮೂಲಕ ವಿವರಿಸಲಾಗಿದೆ. ಇದರಲ್ಲಿ ಒಟ್ಟು ಆರು ಚರಣಗಳಿವೆ. ಮೊದಲ ಚರಣದಲ್ಲಿ, ಜ್ಞಾನಕನ್ಯೆಯನ್ನು 'ಹಡಗದ ಹುಡುಗಿ' ಎಂದು ವರ್ಣಿಸಲಾಗಿದೆ. ಜ್ಞಾನನಿಧಿಯಾದ್ದರಿಂದ ಅವಳನ್ನು ವಿಶಾಲಾರ್ಥದಲ್ಲಿ ಗುರುತಿಸಲಾಗಿದೆ. ಅವಳು ಗೋವಿನ ಕೊಡುಗೆ, ಅಂದರೆ ಪರಾಶಕ್ತಿ ಬ್ರಹ್ಮದಿಂದ ಕೊಡಲ್ಪಟ್ಟವಳು. ಒಲಿದು ಬಂದ ಆಕೆಯ ವೈಯ್ಯಾರದ ನಡಿಗೆಯನ್ನು ಬೆಡಗಿನ ನಡಿಗೆಯೆಂದು, ನಡು ನಡುಗಿ ಬಂದಳೆಂದು ಬಣ್ಣಿಸಲಾಗಿದೆ. ಮುಂದೆ ಎರಡನೆಯ ಚರಣದಲ್ಲಿ

ಆಕೆಯ ಉಡುಗೆಯನ್ನು ಬಯಲಿನ ನೇಯ್ಗೆಯ ಸಿರಿ ಉಡುಗೆ ಎನ್ನಲಾಗಿದೆ. ಆಕೆ ಹಡಗದ ಹುಡುಗಿಯಾಗಿರುವುದರಿಂದ ಉಡುಗೆಯೂ ವ್ಯಾಪಕಾರ್ಥವನ್ನು ಹೊಂದಿದೆ. ಅದು ಭಾವರೂಪದ ಅಮೂಲ್ಯ ಉಡುಗೆ. ಆಕೆಯೊಂದಿಗಿನ ಒಲುಮೆ, ಬಯಕೆಯ ಒಲುಮೆ. ಆದ್ದರಿಂದ ಇಲ್ಲಿ ಸಲುಗೆಯ ಸುಲಿಗೆಯಿದೆ. ಮೂರನೆಯ ಚರಣದಲ್ಲಿ ಕುಂಡಲಿನೀ ಶಕ್ತಿ, ಇಡಾ, ಪಿಂಗಳಾ, ಸುಷುಮ್ನಾ ನಾಡಿಗಳ ಪ್ರಸ್ತಾಪವಿದೆ.'ನಾಡಿಯ ನಡಿಗೆಯ ನಲುವಿನ ನಾಲಿಗೆ' ಎಂಬ ಸಾಲುಗಳಲ್ಲಿ ನಾಲಗೆಯ ದೃಷ್ಟಾಂತದೊಡನೆ ಕುಂಡಲಿನೀ ಶಕ್ತಿ ಜಾಗ್ರತವಾಗಿ ಊರ್ಧ್ವಮುಖಿಯಾಗಿ ಚಲಿಸುವುದನ್ನು ವಿವರಿಸಲಾಗಿದೆ. ಅನಂತರ ಅಮೃತವನ್ನು ಸುರಿಸುವ ಸಹಸ್ರಾರವನ್ನು ಸೇರಿದಾಗ ಮಾತು ಹೇಗೆ ಮೌನ ರೂಪವನ್ನು ಹೊಂದುತ್ತದೆ ಹಾಗೂ ಜೀವಾತ್ಮ, ಪರಮಾತ್ಮರ ಮಿಲನದಿಂದ ಉಂಟಾಗುವ ಮೌನಭಾವವನ್ನು 'ನೆನೆದಿರೆ ಸೋಲುವ' ಎಂಬ ಪದಗಳು ನಿರ್ದೇಶಿಸುತ್ತವೆ. ಭಕ್ತಿಯಲ್ಲಿ ನಾಮಸ್ಮರಣೆಗೆ ಮಹತ್ವ ನೀಡಲಾಗಿದೆ. ಒಂದು ಆಧ್ಯಾತ್ಮ ಸ್ಥಿತಿಯನ್ನು ತಲುಪಿದಾಗ ನಾಮ ಜಪವೂ ಮೌನಕ್ಕೆ ತೆರಳುತ್ತದೆ ಎಂಬುದನ್ನು'ಸೊಲ್ಲು ಸೋಲುವ' ಪದಪ್ರಯೋಗ ಬಯಲಿಗೆಳೆಯುತ್ತದೆ. ಮಾತನ್ನೂ ಮೀರಿದ ಮೌನದ ಧ್ಯಾನಸ್ಥ ಸ್ಥಿತಿಯನ್ನು ಇಲ್ಲಿ ವರ್ಣಿಸಲಾಗಿದೆ. ಶ್ರೀಲಲಿತಾ ಸಹಸ್ರನಾಮ ಸ್ತೋತ್ರದಲ್ಲಿ, ಅಮೃತ ಸುರಿಸುವ ಸಂಗತಿಯು ದೇವಿಯ ಸ್ವರೂಪ ವರ್ಣನೆಯ ಸಂದರ್ಭದಲ್ಲಿ ಬರುತ್ತದೆ.

ಮೂಲಾಧಾರೈಕನಿಲಯಾ ಬ್ರಹ್ಮಗ್ರಂಥಿ ವಿಭೇದಿನೀ।
ಮಣಿಪೂರಾಂತರುದಿತಾ ವಿಷ್ಣುಗ್ರಂಥಿ ವಿಭೇದಿನೀ॥

ಅಜ್ಞಾಚಕ್ರಾಂತರಾಲಸ್ಥಾರುದ್ರಗ್ರಂಥಿವಿಭೇದಿನೀ।
ಸಹಸ್ರರಾಂಬುಜಾರೂಢಾ ಸುಧಾಸಾರಾಭಿವರ್ಷಿಣೀ॥

ತಟಿಲ್ಲತಾ ಸಮರುಚಿಃಷಟ್‌ಚಕ್ರೋಪರಿಸಂಸ್ಥಿತಾ।
ಮಹಾಸಕ್ತಿಃ ಕುಂಡಲಿನೀ ಬಿಸತಂತುತನೀಯಸೀ॥

ಮುಂತಾದ ಸ್ತುತಿಗಳಿಂದ ಯೋಗಸಿದ್ಧಿಯ ಮಾರ್ಗವನ್ನು ಹಾಗೂ ಲಕ್ಷಣಗಳನ್ನು ಬೋಧಿಸಲಾಗಿದೆ. ನಾಲ್ಕನೆಯ ಚರಣ ಆದಿ ಮತ್ತು ಅಂತ್ಯರಹಿತನಾದ ಪರಬ್ರಹ್ಮನ ಸ್ವರೂಪವನ್ನು ಪ್ರತಿಮೆಗಳ ಮೂಲಕ ಸ್ಪಷ್ಟೀಕರಿಸಲಾಗಿದೆ. ಇದನ್ನು ಕವಿ 'ಮುಟ್ಟದ ಮಾಟದ ಹುಟ್ಟದ ಹುಟ್ಟಿಗೆ' ಎಂದು ವರ್ಣಿಸಿದ್ದಾರೆ. ಇಲ್ಲಿ 'ಹುಟ್ಟಿಗೆ' ಶಬ್ದವನ್ನು ಶ್ಲೇಷಾರ್ಥದಲ್ಲಿ ಜನನ ಮತ್ತು ಜೇನು ಹುಟ್ಟು ಎಂಬರ್ಥದಲ್ಲಿ ಬಳಸಲಾಗಿದೆ. ಪರಬ್ರಹ್ಮ ಸಾನ್ನಿಧ್ಯ, ಪಡೆದಷ್ಟೂ ಆನಂದವನ್ನು ಇಮ್ಮಡಿ, ನೂರ್ಮಡಿಗೊಳಿಸುವಂತಹುದು. ಅಂತೆಯೇ, ಜೇನು ಹುಟ್ಟು ಕೂಡ ಸವಿದಷ್ಟೂ ಸವಿರಸವನ್ನು ಸ್ರವಿಸುವಂತಹುದು. ಮನುಷ್ಯ ಜೀವನದ ಪರಮೋದ್ದೇಶವೇ ಬ್ರಹ್ಮಾನಂದವನ್ನು ಹೊಂದುವುದು. ಅಮೃತ ಸಮಾನವಾದ ಬ್ರಹ್ಮಾನಂದವನ್ನು ಹೊಂದಿದ ಜೀವಾತ್ಮನಿಗೆ ಯಾವುದನ್ನೂ ಬಚ್ಚಿಡುವ ಹಾಗೂ ಮುಚ್ಚಿಡುವ ಪ್ರಮೇಯವೇ ಇಲ್ಲ. ಜೀವಾತ್ಮನ ಬ್ರಹ್ಮ ಸಾಕ್ಷಾತ್ಕಾರದ ಬಯಕೆಯ ಅಂಕುರವನ್ನು ಕವಿ ಬಸುರಿನ ಮೊಳಕೆ ಎಂದು ಕರೆದಿದ್ದಾರೆ. ಡಾ. ಕೃಷ್ಣಪ್ಪ ಅವರು,'ನಾಕು ತಂತಿ ಒಂದು ಟಿಪ್ಪಣಿ'ಯಲ್ಲಿ ಇದನ್ನು ಭಗವದ್ಗೀತೆಯ ಶ್ಲೋಕದ ಮೂಲಕ ಸ್ಪಷ್ಟಪಡಿಸಿದ್ದಾರೆ.

ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರ ಸಮುದ್ಭವಂ।
ತಸ್ಮಾತ್ಸರ್ವಗತಂಬ್ರಹ್ಮನಿತ್ಯಂಯಜ್ಞೇ ಪ್ರತಿಷ್ಠಿತಂ ॥ (ಗೀತೆ, ೩, ೧೫)

ಕರ್ಮ ಬ್ರಹ್ಮದಿಂದ ಉಂಟಾಯಿತು. ಬ್ರಹ್ಮಅಕ್ಷರದಿಂದ ಆಯಿತು. ಸರ್ವ ವ್ಯಾಪಿಯಾಗಿರುವ ಬ್ರಹ್ಮ ಸದಾ ಯಜ್ಞದಲ್ಲಿ ನೆಲೆಸಿದೆ. ಯಜ್ಞವನ್ನು ಉಪಾಸನೆ, ಪೂಜೆ ಎಂಬರ್ಥದಲ್ಲೂ ಪರಿಗಣಿಸುತ್ತಾರೆ. ಅಂದರೆ, ಸೃಷ್ಟಿಕರ್ತನೆ ಪ್ರತಿಯೊಂದಕ್ಕೂ ಪ್ರತ್ಯೇಕ ಸ್ವಬಾವ ಮತ್ತು ಕರ್ಮವನ್ನು ಕೊಟ್ಟಿರುವನು. ಕರ್ಮದ ಮೂಲಕವೇ ಭಗವಂತನನ್ನು ಉಪಾಸನೆ ಮಾಡಬೇಕು ಎಂಬುದನ್ನು ಮೇಲಿನ ಶ್ಲೋಕ ಪ್ರತಿಪಾದಿಸುತ್ತದೆ. ಆರನೆಯ ಚರಣದಲ್ಲಿ 'ಭೂತದ ಭಾವ', ಅಂದರೆ, ಮರ್ತ್ಯದ ಭಾವದಲ್ಲಿ 'ಉದ್ಭವ ಜಾವ'ವಾಗಿ, ಹೊಸ ಆವಿರ್ಭಾವದ ಜ್ಞಾನ ಸಾಕ್ಷಾತ್ಕಾರವೆಂಬ ಹೊಸ ಹುಟ್ಟನ್ನು ಹೊಂದಿದ ಜೀವಿಗೆ ಜ್ಞಾನಕನ್ಯೆ ಜ್ಞಾನವೆಂಬ ಹಾಲನ್ನು ಊಡಿಸುತ್ತಾಳೆ. ಇಲ್ಲಿ ನರಶ್ರೇಷ್ಠನಾದ ಅರ್ಜುನನನ್ನು ಪ್ರತಿನಿಧಿಯಾಗಿಸಿ ಭಗವದ್ಗೀತೆಯ ಸಾರವನ್ನು ಉಣಬಡಿಸಿದ ಭಗವಾನ್ ಶ್ರೀಕೃಷ್ಣನನ್ನು ಬಣ್ಣಿಸುವ ಧ್ಯಾನ ಶ್ಲೋಕವನ್ನು ಉದಾಹರಿಸಬಹುದು.

ಸರ್ವೋಪನಿಷದೋಗಾವೋ ದೋಗ್ಧಾ ಗೋಪಾಲನಂದನಃ।
ಪಾರ್ಥೋ ವತ್ಸಃಸುಧೀರ್ಭೋಕ್ತಾದುಗ್ಧಂಗೀತಾಮೃತಂ ಮಹತ್॥

ಭಗವಾನ್ ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಅಮೃತ ಸಮಾನವಾದ ಗೀತೆಯ ಮೂಲಕ ಜ್ಞಾನವನ್ನು ಬೋಧಿಸಿದಂತೆ, ಇಲ್ಲಿ ಜ್ಞಾನ ಕನ್ಯೆಯು ನವಪ್ರತಿಭೆಯ ಜ್ಞಾನವನ್ನು ಜೀವಾತ್ಮನಿಗೆ ಉಣಬಡಿಸುತ್ತಾಳೆ.

ದ. ರಾ. ಬೇಂದ್ರೆ ಕಾವ್ಯಕೂಟ ಬೆಂಗಳೂರು ಇವರು ಸಂಶೋಧನ
ವಿದ್ಯಾರ್ಥಿಗಳಿಗಾಗಿ ನಡೆಸಿದ ಸ್ಪರ್ಧೆಯಲ್ಲಿ (2023)
ದ್ವಿತೀಯ ಬಹುಮಾನ ಗಳಿಸಿದ ಲೇಖನ

*(ಮುಂದುವರಿಯುವುದು)*

UIL
UGRU INDUSTRIES


*With Best Compliments from*

UGRU INDUSTRIES
**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in
ADVT.

# Havyaka Picnic on 21st January, 2024 (Sunday)
# D. N. Patil Farm, Badlapur




Picnics are always fun and when they are organized for our own Havyaka Welfare Trust members, they are all the more fun.

With the big bang we are announcing our much awaited Annual Picnic on 21st January-2024 at "D.N.Patil Farm", Badlapur.

Transport arrangements : 4 Special buses with "HAVYAKA WELFARE TRUST " banner in the front with pickup points shown below has been arranged. Members are requested to give their names and contact numbers to the respective co-ordinators in advance, before 15th January, 2024, as proper arrangements can be made.

**Co- ordinators :**

| | | |
|---|---|---|
| Anant Bhat | Bandra | 9892623091 |
| R. P. Hegde | Santacruz | 9324205262 |
| Shanta Bhat | Charkop | 7208171617 |
| Tanuja Hegde | Borivili | 9869431749 / 8169515822 |
| Shashikala Hegde | Dahisar | 9869015917 / 8779136582 |

**All members staying in Central and South Mumbai are requested to board the bus at Dadar TT**

1. 7.00 am : Dadar TT circle after signal towards Sion
2. 7.05 am : Sion Hospital
3. 7.10 am : Bandra (E) - On Western Express Highway after signal.
4. 7.15 am : Santacruz (E) - On Western Express Highway after Santacruz station signal.
5. 7.20 am : Vile Parle (E) - On Western Express Highway after Vile Parle station signal.
6. 7.25 am : Andheri (E) - On Western Express Highway before Sahara Road signal.
7. 7.35 am : Goregaon - On Western Express Highway after Aarey Colony signal.
8. 7.40 am : Malad - Pushpa Park
9. 7.45 am : Kandivli - Near Avenue Hotel
10. 7.55 am : Borivli West - Gokul Hotel
11. 8.05 am : Dahisar Check Naka

*PAGE DONATED BY : **SHRI N. R. HEGDE, DOMBIVLI***

12. 8.10 am : Kashimira Junction
13. 8:20 am : Fountain Hotel (Members from Vasai, Virar are requested to join at this Point)
14. 8: 30 am : Ovala
15. 8: 45 am : Hiranandani Estate
16. 8: 55 am : Majiwada

Then directly to Picnic Spot.

**BUS ROUTE NO. 2 PANVEL**

**Co- ordinators :**

| | | |
|---|---|---|
| Mahesh Hegde | Kharghar | 906007396 |
| Umesh Maskeri | Kharghar | 9930178352 |
| Dr. Kumar Bhat | Panvel | 8928689728 |
| S. V. Shastri | Panvel | 9322881656 / 9869902015 |

**Bus Starts From :**

1. 7.15 am : Panvel Railway Station
2. 7.20 am : Garden Restaurant Panvel
3. 7.25 am : Khanda Colony Junction
4. 7.30 am : Kalamboli - Opp. Mac Donald Restaurant
5. 7.35 am : Kharghar - Opp. Little World Mall on Highway
6. 7.40 am : Belapur Circle
7. 7.45 am : Opp. D. Y. Patil College / L. P. Stop
8. 7.50 am : Sanpada - Opp. Railway Station Junction
9. 7.55 am : Vashi - Below Fly Over
10. 8:00 am : Rabale Railway Station
11. 8.10 am : Airoli

From there the bus will reach the spot directly.

**BUS ROUTE NO. 3 CHEMBUR**

**Co- ordinators :**

| | | |
|---|---|---|
| Gautam Upadhya | Mulund | 9833325265 |
| G. V. Hegde | Mulund | 9930156877 |
| Vishnu Bhagwat | Thane | 9819798245 |
| Prakash Rao | Vikhroli | 9004689538 |
| Akshay Hegde | Chembur | 9920456216 |
| G. S. Bhat | Mulund | 9969192325 |

1. 7.15 am : Swastik Chambers on S. G. Barve Marg Road
2. 7.25 am : Ghatkopar - Ramabai Colony Bus Stop
3. 7.25 am : Vikhroli - Kannamwar Nagar Bus Stop
4. 7.35 am : Bhandup Pumping Station
5. 7.40 am : Mahada Colony (Mulund-East) below Fly-over
6. 7.50 am : Theen Hath Naka
7. 8.00 am : Majiwada Thane
8. 8.05 am : Kalwa Naka
9. 8.10 am : Shilphata
10. 8.15 am : Palava

Then directly to Picnic Spot.

**BUS ROUTE NO. 4 DOMBIVLI**

| | |
|---|---|
| Ramesh Vaidya | 8879303710 |
| Umesh Hegde | 8080868649 |
| G. V. Hegde | 9167434626 |
| N. K. Hegde | 8850797296 |
| D. V. Bhat | 9372339050 |

**Bus Starts From :**

1. 7.15 am : Havyaka Office, Dombivli
2. 7.30 am : Bhoir Gymkhana
3. 7.40 am : Hotel Samrat, Deen Dayal Road
4. 7.50 am : Near Tilak Nagar Post Office Tilak Chowk
5. 8.00 am : Manjunath Vidyalaya
6. 8.10 am : Pendharkar Chowk

Then directly to Picnic spot

**Picnic Activity Co-ordinators**

| | |
|---|---|
| Gautam Upadhya | G. V. Hegde |
| Vishnu Bhagwat | Shashikala Hegde |
| Nagaraj Bhat | Prakash Hegde |
| G. S. Bhat | Shobha Bhat |
| Prakash Rao | Vasant Bhat |
| Asha Bhagwat | |

**Children Below 12 Years Free**

Adults. Rs. 400/-

Members are requested to collect the coupons against payment in the bus. Members who are coming by their own vehicle to the picnic spot can collect coupons at the venue.

The estimated cost per member is Rs 1,125/-. Havyaka is subsidizing the cost to Rs 725/-

HALDI KUM KUM programme will be held in the afternoon at the picnic spot.

How To Reach By Road : As Per The Map

Members also can reach taking train upto Badlapur Station (E) and take auto for the picnic spot. Landmark-Dhaivali Village.

Venue Address :- D. N. Patil Farm, Dahivali Village, Kondewshwar Temple Road, Badlapur East, Maharashtra, 421503.

*PAGE DONATED BY : **SHRI ROKESH HEGDE & FAMILY, DAHISAR***

# Arecanut Farming and Economic Empowerment of Farmers

✍ **Dr. G. V. Joshi, Kekkar**

*(Contd... from last issue)*

**Other Issues and Needs**

One of the major obstacles in the context of empowering farmers growing arecanut in India is the low productivity as compared to China, Myanmar, Malaysia, Thailand, Sri Lanka, and Maldives. Prakash Kammardi highlighted in 2013 that the average productivity of arecanut in China was 225% higher than that of India and it was a whopping 700% higher in Maldives. More or less the same situation prevails even now. Therefore, very serious efforts are needed in states growing arecanut to raise its productivity. Regular support of the government, timely supply of inputs, strenuous efforts by research centers and commitment by farmers growing arecanut are now called for.

The diseases noticed in some arecanut plantations in D.K are causing additional anxiety to arecanut farmers to which the experts in Central Plantation Crops Research Institute (CPCRI) have paid attention. Their observation that of the three diseases bud rot, crown rot and fruit rot, the latter two are fatal if they are not noticed and treated in time is nothing short of a warning. To make services of experts available to farmers facing anxiety without any delay is no doubt the crying need of the hour.

This author in his Ph.D. thesis (1987) explained the major difficulty in getting reliable official data to indicate changes in cropping pattern, production and productivity of major garden crops and actual investment in agriculture at the village level. That such difficulties continue to exist creating challenges for researchers even now is indicated by leading researchers with special reference to arecanut in the national economy. These are the difficulties that come in the way of assessing the actual economic empowerment of farmers.

Economic empowerment of farmers growing arecanut in India depends on a large number of economic and non-economic factors most of which are deep rooted with the result that both the Centre and States have to take up measures on a priority basis to realize the interrelated goals of augmenting production and productivity. CAMPCO has undoubtedly the credit of initiating several needed changes to promote the development programmes. But sudden policy announcements without imagination, forethought and planning would retard economic empowerment of farmers producing arecanut in India without which rural India would suffer and progress of urban India would be halted.

**Select References**




Collins G.F.S,1926, *Introductory Report to the Resettlement Reports of the Sirsi, Siddapur and Yellapur Taluks and the Mundgod Mahal of the Kanara Collectorate,* Government Central Press, Mumbai.

Damle Chandrashekhar (1991), Agrarian Relations and Reforms in Dakshina Kannada District, eds C. N. Ramachandran, et al, *Perspectives on Dakshina Kannada and Kodagu,* Mangalore University

Gajanana T. M, 1985, *An Analysis of Supply Response of Arecanut in Karnataka,* M.Sc Thesis (Unpublished), Submitted to University of Agricultural Sciences, Bangalore.

Hegde Aaron S and Deal John, 2014, Arecanut Farming in Southern India : A Case Study. *International Journal of Business and Social Science,* Vpl.5,No.10, September2014.

Joshi G. V. 2013, Culture of Arecanut Agriculture : Growth, Change and its Future, *Krashi Bimba Pathrike* (Kannada) Vol 13, No.13, No.1, November 2013.

Joshi G. V. 1987, Agrarian Structure and Tenancy Reform : A Case Study of Uttara Kannada, Ph. D Thesis submitted to Karnataka University, Dharwad (Unpublished).

Kammardi Prakash T. N 2013, Arecanut in the National Economy, Deparrtment of Agricultural Sciences, University of Agricultural Sciences, Bangalore,Unpublished Research Paper.

Karunakaran N. 2016, Significance of Arecanut Crop in the Agrarian Economy of Kerala, *PEARL Multiplidisciplinary Journal,* Vol.2. No.2, August 2016.

Karunakaran N. 2018, Cost and Returns of Arecanut Cultivation in Kerala, *TECNIA Journal of Management Studies,* Vol.12, October 2017-March 2018

Karunakaran N. 2014, Impact of a Cooperative Society on the Arecanut Marketing and Processing Cooperatives Ltd., *Agricultural Economics Research Review* Vol. 27 (Conference Number).

Ramappa, B.T, 2013, Economics of Arecanut Cultivation in Karnataka: A Case Study of Shivamogga District, *ISOR Journal of Agriculture and Veterinary Science,* Vol.3, No 1, May- June 2013.


*Courtesy : Golden Jubilee Souvenir of CAMPCO, Head Office, Mangalore*


*PAGE DONATED BY :* ***SHRI ANANT GANESH BHAT, BANDRA & FAMILY***

# NEW MEMBERS

| No. | Name | Native |
|---|---|---|
| LM-1686 | Siddhant Prakash Hegde, Thane | Aminalli - Sirsi |
| LM-1687 | Sandesh K. Hiregange, Kalyan | Gokarna |
| LM-1688 | Aditya Satish Hegde, Juinagar | Isloor - Sirsi |
| LM-1689 | Niranjan M. Hegde, Koperkhairane | Sonda Sirsi |
| LM-1690 | Vinod Bhat, Palava - Dombivli | Muroor - Kumta |
| LM-1691 | Sripad Dattatreya Hegde, Chembur | Kallabbe - Kumta |
| LM-1692 | Guruprasad T. Hegde, Thane | Kallabe - Kumta |
| LM-1693 | Divakar Karanth, Mulund (West) | Gokarna |
| LM-1694 | Praveen Seetaram Hegde, Goregaon | Sirsi |
| LM-1695 | Vandana Gajanan Bhat, Mulund | Karki |
| LM-1696 | Srinivasa Mandgi, Thane (West) | Belgaum |
| LM-1697 | Usha Mandgi - Thane (West) | Belgaum |
| LM-1698 | Chintan Krishna Bhat, Thane | Puttur |
| LM-1699 | Apurva Bhat, Bantwal | Bantwal |
| LM-1700 | Veena Satish Bhat, Nilkod | Honnavar |
| LM-1701 | Satish Shivaram Bhat, Nilkod | Honnavar |
| LM-1702 | Kanchan Vinayak Bhat, Nilkod | Honnavar |
| LM-1703 | Vinayak Ganapati Bhat, Nilkod | Honnavar |
| LM- 1704 | Mangalagauri G. Bhat, Parel | Boppanalli |
| LM-1705 | Dattatraya V. Hegde, Kodlalli - Sirsi | Sirsi |
| LM-1706 | Pramod R. Bhat, Honnavar | Honnavar |
| LM-1707 | Pelthadka Mahabala Bhat, Pune | Kasargod |
| LM-1708 | Valkunja Shyamsundar N., Pune | Valkunja |
| LM-1709 | Dr. Mohan Kinila T., Pune | Kinila - Bantwal |
| LM-1710 | Ganesh Prasad, Pune | Kinila |
| LM-1711 | Kinila Ravindra Kumar, Pune | Kinila Bantwal |
| LM-1712 | Anand Krishna Bhat, Pune | Madangal |
| LM-1713 | Ashok Kumar Bhat, Pune | Kasargod |
| LM-1714 | Venkatesh Bhat, Kharghar | Kasargod |
| LM-1715 | Prateek Laxmeesha Hegde, Bengle | Sirsi |
| LM-1716 | Kumar G. Hegde | Kallabbe |
| LM-1717 | Subray R. Bhat | Kadtoka |
| PT-138 | Prakash Sreedhar Hegde, Thane | Aminalli - Sirsi |
| PT-139 | Raghavendra G. Hebbar, Bhandup | Kundapur |

*PAGE DONATED BY :* ***SHRI V. G. BHAT, NIGDI***

# Thinking of Risk before Return

✍ **Vinod N. Bhat**



**Passive Investing - Index Funds**

Anita was a 27-yr old software engineer and had come to Siddharth's office to seek his advice on starting her financial planning journey.

As usual, Siddharth walked her through the basic principles of financial planning and asset allocation as well as how she could build a portfolio of Equity, Debt, and Hybrid Mutual Funds.

'Thanks Siddharth. You have explained it wonderfully. But I still think this is too complicated for me,' she told him. 'With a full-time job, I just won't have the time to track the stock market or evaluate so many different mutual funds.'

'Well, in that case let's make it even more simple for you,' Siddharth replied. 'There's a solution to your problem which many others face too.'

'Oh. Is there?' Anitha was interested.

'Yes. And it's called an Index Fund. Warren Buffet, the most famous investor in the world has said that a low-cost index fund is the most sensible equity investment for the great majority of investors. By periodically investing in an index fund, the know-nothing investor can actually outperform most investment professionals.'

'That's great. But now you'll need to explain to me what an index fund is.'

'You may have seen on TV or read in the newspaper about how stock indices such as the Sensex or Nifty 50 moved on a particular day. These indices are just a collection of stocks in a certain proportion. And index funds only invest in the companies present in an index and in the same proportion.'

'Yes, I have read about the Sensex crossing 72,000 or the Nifty crossing 21,000 levels. But I never understood what it meant.'

'For example, the Nifty 50 index is a basket of the fifty largest publicly traded companies in India. So, a Nifty 50 Index Fund would replicate the Nifty 50 index.'

'OK. So, an index fund is just a basket of stocks replicating an index.'

'You got it.'

'OK. But what is the advantage of buying an index fund?'

'The most important advantage is that you don't need to know anything about the stock market or even track it if you don't have the time. You just invest in the index fund and you get exposure to the broad market.'

'Understood.'

'The second advantage is that you automatically diversify across a basket of stocks which reduces your risk. You don't need to research individual stocks or worry about how much to invest in each stock.'

'Right. So, if I invest in a Nifty 50 index fund, I automatically invest in the Top 50 largest companies in India.'

'Exactly. And the third advantage is that you don't need to time the market. An index fund is ideal for investors to start a SIP or Systematic Investment plan.'

'I've heard about SIPs. It's where I can invest small amounts slowly over a long period of time, correct?'

'That's right. But that's not all. The fourth advantage is that they have lower expenses than other Mutual Funds. So, you save on your cost of investing.'

'How do they manage to do that?'

'That's because they are designed to be passive and just replicate the index. So, they don't require much attention from fund managers.'

'Wow. I never knew about index funds and the fact they have so many advantages.'

'Yes, they can make investing accessible to the masses.'

'Thanks Siddharth,' Anita said. 'I will start a SIP in a Nifty 50 Index Fund.'

'That's great, Anita,' Siddharth replied. 'The most important thing is to get started.'

'I will,' Anita replied.

*(to be continued)*

[Vinod Bhat is the author of the book **'The Financial Independence Marathon'** which has been recently published by Penguin India. Readers can refer to the book for many such golden nuggets. The book is available on Amazon.in at : https://www.amazon.in/Financial-Independence-Marathon-Unlock-Power/dp/0143459988]

*PAGE DONATED BY :* ***SMT. KALA BHAGWAT,*** **KHARGAR** ***IN MEMORY OF MOTHER LATE SMT. GOURI BHAT***

# ಮಾಸ ಭವಿಷ್ಯ

✍ ಶ್ರೀಪತಿ ಭಟ್

**ಮೇಷ** : ಹಿಂದೆ ನಡೆದಿರುವ ವಿಚಾರದ ಬಗೆಗಿನ ಯೋಚನೆಗಿಂತ ಲಭ್ಯವಿರುವ ಅವಕಾಶದ ಬಗ್ಗೆ ಯೋಚಿಸುವುದು ಉತ್ತಮ. ಕಚೇರಿಯ ಹಣದ ವಿಚಾರದಲ್ಲಿ ಖರ್ಚು- ವೆಚ್ಚಗಳ ವಿಷಯದಲ್ಲಿ ಜಾಗ್ರತೆ ಇರಲಿ. (ಶುಭ ಸಂಖ್ಯೆ 1)

**ವೃಷಭ** : ನಿಮಗೆ ಅಗತ್ಯವಿಲ್ಲದ ವಿಚಾರಗಳ ಬಗ್ಗೆ ಮಾತನಾಡುವುದಾಗಲಿ ಅಥವಾ ಸಲಹೆ ನೀಡುವುದಾಗಲಿ ಸರಿಯಲ್ಲ. ಪ್ರೀತಿಯ ವಿಚಾರದಲ್ಲಿ ಗುಣಾತ್ಮಕ ಬೆಳವಣಿಗೆ ಅನುಭವಕ್ಕೆ ಬಂದೀತು. ಚಿಂತೆಗಳಿಗೆ ನೀವೇ ಆಶ್ರಯ ತಾಣರಾಗಬೇಡಿ. (ಶುಭ ಸಂಖ್ಯೆ 3)

**ಮಿಥುನ** : ಯಾವ ಉದ್ದೇಶದಲ್ಲಿಯೂ ಯಾರಿಗೂ ಸಾಲ ನೀಡಬೇಡಿ. ಉದ್ಯೋಗ ವ್ಯವಹಾರದಲ್ಲಿನ ತಲ್ಲೀನತೆಯು ಧನಾರ್ಜನೆಗೆ ಕಾರಣವಾಗುವುದು. ಮನೆಯಲ್ಲಿ ವಿವಾಹದ ವಿಷಯಗಳು ಚರ್ಚೆಯಾಗುವುದು. (ಶುಭ ಸಂಖ್ಯೆ 9)

**ಕರ್ಕಾಟಕ** : ಶ್ರೀ ದೇವತಾನುಗ್ರಹ ನಿಮ್ಮ ಪಾಲಿಗೆ ಸಂಪೂರ್ಣವಿದ್ದು ತೊಂದರೆ ನಿವಾರಿಸಿ ವೃತ್ತಿ ರಂಗದಲ್ಲಿ ಉತ್ತಮ ರೀತಿಯಲ್ಲಿ ಮುಂದುವರಿಯಲು ಪೂರಕನಾಗಿರುತ್ತಾನೆ. ಸಿದ್ಧ ಉಡುಪುಗಳ ರಫ್ತು ವ್ಯಾಪಾರದಿಂದ ಹೇರಳ ಲಾಭ. (ಶುಭ ಸಂಖ್ಯೆ 5)

**ಸಿಂಹ** : ಅವಿವಾಹಿತರಿಗೆ ವೈವಾಹಿಕ ಸಂಬಂಧದ ಕಂಕಣ ಬಲಕ್ಕೆ ಪೂರಕ ವಾತಾವರಣ ಸೃಷ್ಟಿಯಾಗಲಿದೆ. ಪಾಲುದಾರಿಕೆಯಲ್ಲಿ ಮೋಸ ಹೋಗುವ ಲಕ್ಷಣ ಇದೆ. ಹೆಚ್ಚಿನ ಗಮನವಿರಲಿ. ವ್ಯಾಪಾರದಲ್ಲಿ ಸಾಧಾರಣ ಲಾಭ ಸಿಗುತ್ತದೆ. (ಶುಭ ಸಂಖ್ಯೆ 7)

**ಕನ್ಯಾ** : ಮಾನಸಿಕ ಒತ್ತಡ ಹೆಚ್ಚಿಸುವಂತಹ ಕೆಲಸ ಮಾಡುವವರಿಗೆ ಸಹಾಯಕ ಅವಶ್ಯಕತೆ, ಅನಿವಾರ್ಯತೆ ಹೆಚ್ಚಾಗುವುದು. ವಾದ ವಿವಾದಕ್ಕೆ ತೆರೆ ಎಳೆಯುವ ಪ್ರಯತ್ನ ಮಾಡಿ ಉದ್ಯಮದಲ್ಲಿ ಬಂಡವಾಳ ಹೂಡಲು ಈ ಸಮಯ ಸರಿಯಲ್ಲ. (ಶುಭ ಸಂಖ್ಯೆ 2)

**ತುಲಾ** : ಅತಿ ಬುದ್ಧಿವಂತಿಕೆಯ ಜನರಲ್ಲಿ ವ್ಯವಹಾರ ನಡೆಸಬೇಕಾದರೆ ಜಾಗ್ರತೆ ಇರಲಿ. ಲೆಕ್ಕ ಪತ್ರಗಳಿಲ್ಲದೆ ಕೇವಲ ನಂಬಿಕೆಯಲ್ಲಿಯೇ ವ್ಯವಹಾರವನ್ನು ಮಾಡುವುದು ಸರಿಯಲ್ಲ. ಚಿನ್ನಾಭರಣ ವ್ಯಾಪಾರಿಗಳಿಗೆ ಲಾಭವಿರಲಿದೆ. (ಶುಭ ಸಂಖ್ಯೆ 4)



**ವೃಶ್ಚಿಕ** : ಈದಿನ ನಿಮಗೆ ಕಾಡುವ ಸಮಸ್ಯೆ ಮತ್ತು ಅಸಹಾಯಕ ಸ್ಥಿತಿಯಲ್ಲಿ ಯಾರಲ್ಲೂ ನಂಬಿಕೆ ಇಡದಂತಹ ಪರಿಸ್ಥಿತಿ ತೋರಬಹುದು. ರೈತರಿಗೆ ತರಕಾರಿ ಬೆಳೆಯಲ್ಲಿದ್ದ ನಿರೀಕ್ಷೆಯು ಪೂರ್ಣವಾಗಿ ಸಂತೋಷಕ್ಕೆ ಕಾರಣವಾಗುವುದು. (ಶುಭ ಸಂಖ್ಯೆ 6)

**ಧನು** : ನಿಮಗೆ ಗೊತ್ತಿಲ್ಲದ ವಿಷಯ ಗುರು ಹಿರಿಯರ ಬಳಿಯಲ್ಲಿ ಕೇಳಿ ತಿಳಿಯುವುದು ಅಗೌರವವೆಂದು ಭಾವಿಸಬೇಡಿ. ವಿದೇಶಿ ವಸ್ತುಗಳ ಮೇಲೆ ಹೆಚ್ಚಿನ ಹಣವ್ಯಯ ಆಗುತ್ತದೆ. ದೇಹದಲ್ಲಿ ಜೀರ್ಣಾಂಗ ಸಮಸ್ಯೆ ಕಾಡಬಹುದು. (ಶುಭ ಸಂಖ್ಯೆ 8)

**ಮಕರ** : ನಿಮ್ಮ ಕಾರ್ಯಕ್ಷೇತ್ರದಲ್ಲಿ ದೂರ ಸಂಚಾರ ಹೆಚ್ಚಾಗಿದ್ದರೂ ಎಣಿಕೆಗೂ ಮೀರಿ ಧನಾಗಮವಿದ್ದು ಎಲ್ಲಾ ಕೆಲಸ ಕಾರ್ಯಗಳು ಸಿದ್ಧಿಸಲಿವೆ. ಗೆಳೆಯರ ಅಪರೂಪದ ಬೇಟಿ ಜೊತೆ ಮಾತುಕತೆ, ಊಟ ನಡೆಯುವುದು (ಶುಭ ಸಂಖ್ಯೆ 3)

**ಕುಂಭ** : ನೀವು ಕೈಗೊಂಡ ಸಂಸ್ಥೆಯ ಅಥವಾ ವೈಯಕ್ತಿಕ ಅಭಿವೃದ್ಧಿಯ ಕಾರ್ಯಗಳೆಲ್ಲಾ ಉತ್ತಮ ರೀತಿಯಲ್ಲಿ ನಡೆಯಲಿದೆ. ಇಷ್ಟ ವಸ್ತುಗಳ ಖರೀದಿಯಿಂದ ಹಣವ್ಯಯ. ಯಾವ ಕೆಲಸದಲ್ಲೂ ಅಪೇಕ್ಷೆಗಳು ಇರದು. (ಶುಭ ಸಂಖ್ಯೆ 1)

**ಮೀನ** : ಎಲ್ಲಾ ರೀತಿಯ ದವಸ ಧಾನ್ಯ ಹಾಗೂ ಮಸಾಲೆ ಪದಾರ್ಥಗಳ ಸಗಟು ಹಾಗೂ ರಫ್ತು ವ್ಯಾಪಾರಿಗಳಿಗೆ ಅಧಿಕ ಮಟ್ಟದ ವ್ಯಾಪಾರ ಇರಲಿದೆ. ನಿಮ್ಮ ಅತಿಯಾದ ಸರಳತೆಯನ್ನು ನಿಮ್ಮ ಸಹಚರರು ದುರುಪಯೋಗ ಪಡಿಸಿಕೊಳ್ಳುವರು. (ಶುಭ ಸಂಖ್ಯೆ 3)

(ಶ್ರೀ ಶ್ರೀಪತಿ ಭಟ್ ಆಚಾರ್ಯರು ಪೇಜಾವರ ಶ್ರೀಗಳ ಅಧೀನದಲ್ಲಿ ಅವರ ವಿದ್ಯಾಪೀಠ ಆಶ್ರಮದಲ್ಲಿ ಅಧ್ಯಯನ ಮುಗಿಸಿದ್ದಾರೆ. ಅವರಿಗೆ ಜ್ಯೋತಿಷ್ಯ ಶಾಸ್ತ್ರದಲ್ಲಿ 20 ವರ್ಷಗಳ ಅನುಭವವಿದೆ. ವೇದ, ಉಪನಿಷತ್, ಜ್ಯೋತಿಷ್ಯದ ಪ್ರಕಾರಗಳನ್ನು ಚೆನ್ನಾಗಿ ಅಧ್ಯಯನ ಮಾಡಿ 20 ವರ್ಷಗಳ ಅನುಭವದಲ್ಲಿ ಬಡಬಗ್ಗರಿಗೆ ಸಹಾಯ ಮಾಡುತ್ತಾ ಇದ್ದಾರೆ. ಹನುಮಂತ ನಗರದ ಮಾರುತಿ ಸರ್ಕಲ್‌ನಲ್ಲಿ ಇರುವ ಬಲಮುರಿ ಗಣಪತಿ ದೇವಸ್ಥಾನದ ಪ್ರಧಾನ ಅರ್ಚಕರಾಗಿಯೂ 25 ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಸಂಪರ್ಕ ಸಂಖ್ಯೆ : 99000 00198)

## HAVYAKA WELFARE TRUST BANK A/C DETAILS

Due to the merger of Corporation Bank with the Union Bank of India we request the members to note the change in the bank details

**Union Bank of India, Santacruz (E), Mumbai Branch, Mumbai 400 029**

1) **Havyaka Welfare Trust**
   **S.B. A/c No. 520101249405926**
   **IFS Code : UBINO904996**

2) **Havyaka Welfare Trust Women Welfare Cell**
   **S.B. A/c No. 520101249405962**
   **IFS CODE : UBINO904996**

**Donations to 'Havyaka Welfare Trust' qualify for tax deduction under section 80 (G).**

*PAGE DONATED BY : **SHRI CHIDANANDA BHAGWAT IN MEMORY OF HIS FATHER LATE KRISHNA T. BHAGWAT***

# ಬಿಡುಗಡೆ

✍ ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ



'ಬಿಡುಗಡೆ', ಪದದ ವ್ಯಾಪ್ತಿಯೇ ಅಪಾರ. ಈ ಪದವನ್ನು ನಾವೆಲ್ಲ ಲಾಗಾಯ್ತಿನಿಂದ ಕೇಳುತ್ತಲೇ ಬಂದಿದ್ದೇವೆ. ಕಾಲ ಕಾಲಕ್ಕೆ ತನ್ನ ಅರ್ಥ ವ್ಯಾಪ್ತಿಯನ್ನು ಬದಲಿಸಿದರೂ, ಮೂಲತತ್ವ ಅದೇ ಉಳಿದಿದೆ.

ಯಾವುದೇ ಬಂಧನದಿಂದ ಮುಕ್ತಿಪಡೆದು ಹೊರಬರುವುದೇ ಬಿಡುಗಡೆ. ಸ್ವಾತಂತ್ರ್ಯ ಪೂರ್ವದಲ್ಲಿ ಬಿಡುಗಡೆ ಪದಕ್ಕೆ ತನ್ನದೇ ಆದ ಘನತೆ, ಗೌರವ, ವಿಶಿಷ್ಟತೆ ಇತ್ತು.

ಪರಕೀಯರ ದಬ್ಬಾಳಿಕೆಯಿಂದ ಹೊರಬರಲು ಅದೆಷ್ಟೋ ಭಾರತೀಯರು ಬ್ರಿಟಿಷರ ವಿರುದ್ಧ ಧರಣಿ, ಸತ್ಯಾಗ್ರಹ, ಉಪವಾಸ, ಇತ್ಯಾದಿಗಳನ್ನು ಮಾಡಿದಾಗ, ಅಂಥವರನ್ನು ಶಮನ ಮಾಡಲು ಬ್ರಿಟೀಷರು ನಮ್ಮವರನ್ನು ಜೈಲಿಗೆ ಅಟ್ಟುತ್ತಿದ್ದರು. ಕೆಲ ತಿಂಗಳು, ವರ್ಷಗಳು ಕಳೆದ ಮೇಲೆ ಅವರಲ್ಲಿ ಕೆಲವರನ್ನು ಬಿಡುಗಡೆ ಮಾಡುತ್ತಿದ್ದರು. ಅದೇ ವ್ಯಕ್ತಿಗಳು ತಿರುಗಿ ಬಿದ್ದಾಗ ಮತ್ತೆ ಜೈಲು ! ಕಾಲಾ ಪಾನಿಯಂತಹ ಕಠಿಣ ಶಿಕ್ಷೆಗೂ ಗುರಿಪಡಿಸಿ ಕೊನೆಯಲ್ಲಿ ಬದುಕಿದ್ದರೆ ಬಿಡುಗಡೆ ಮಾಡುತ್ತಿದ್ದರು. ಇನ್ನು ಕೆಲವರಿಗೆ ಬಿಡುಗಡೆಯ ಭಾಗ್ಯವೂ ಇಲ್ಲದೇ ದೇಶಕ್ಕಾಗಿ ಪ್ರಾಣ ತೆರುವಂತಾಗಿದ್ದನ್ನೂ ಓದಿದ್ದೇವೆ, ಕಂಡಿದ್ದೇವೆ.

ಅದರ ನಂತರ ಈ ಬಿಡುಗಡೆ ಪದ ಹೆಚ್ಚು ಬೆಳಕಿಗೆ ಬಂದಿದ್ದು ತುರ್ತು ಪರಿಸ್ಥಿತಿ ಕಾಲದಲ್ಲಿ. ಆಡಳಿತ ಪಕ್ಷವನ್ನು ವಿರೋಧಿಸುವವರನ್ನೆಲ್ಲ ಜೈಲಿಗೆ ಅಟ್ಟಿ, ಕೆಲ ತಿಂಗಳ ಮೇಲೆ ಬಿಡುಗಡೆ ಮಾಡಿದ್ದು. ಅದರಲ್ಲೂ ವಿಶೇಷವಾಗಿ ವಿರೋಧಿ ಪಕ್ಷದ ನಾಯಕರುಗಳನ್ನೆಲ್ಲ ಒತ್ತಟ್ಟಿಗೆ ಜೈಲು ಸೇರಿಸಿದ್ದು. ಅದೊಂದು ಕರಾಳ ಘಳಿಗೆ ಅಂದರೂ ತಪ್ಪಲ್ಲ. ಅಂದು ಜೈಲು ಸೇರಿ ಬಿಡುಗಡೆ ಹೊಂದಿದವರು ರಾಜಕೀಯವಾಗಿ ಹೆಚ್ಚು ಮುನ್ನಲೆಗೆ ಬಂದಿದ್ದೂ ಇತಿಹಾಸವೆ. ಆದರೂ ಜನಸಾಮಾನ್ಯರ ಮನಸ್ಸಿನಲ್ಲಿ 'ಬಿಡುಗಡೆ' ಪದ ಅಚ್ಚಳಿಯದೇ ಇನ್ನೂ ಜೀವಂತವಾಗಿ ಉಳಿದಿದೆ ಎಂಬುದೂ ಅಷ್ಟೇ ಸತ್ಯ.

ಇವೆಲ್ಲಕ್ಕೂ ಹೊರತಾದ ಇನ್ನೊಂದು ವಿಶೇಷ ಸಂದರ್ಭ ಅಂದರೆ ಪುಸ್ತಕ ಬಿಡುಗಡೆ ! ಅಷ್ಟಕ್ಕೂ ಆ ಪುಸ್ತಕ ಇಲ್ಲಿಯ ತನಕ ಯಾರ ಬಂಧನದಲ್ಲಿತ್ತು ಅಥವಾ ಯಾರು ಅದನ್ನು ಬಂಧಿಸಿಟ್ಟಿದ್ದರು ಎಂಬುದು ಮಾತ್ರ ಯಾರೂ ಅರಿಯದಂತಹುದು. ಆದರೂ ಒಂದು ಪುಸ್ತಕ ತಯಾರಾಯಿತೆಂದರೆ ಅದಕ್ಕೂ ಬಿಡುಗಡೆಯ ಭಾಗ್ಯ ಬರಲೇ ಬೇಕು ಎಂಬುದು ಅಲಿಖಿತ ನಿಯಮ !

ಪುಸ್ತಕ ಬಿಡುಗಡೆಯ ಗಡಿ-ಬಿಡಿಯನ್ನು ಮಾತ್ರ ಅನುಭವಿಸಲೇಬೇಕು. ಅದೇನು ಕುತೂಹಲ, ಅದೆಷ್ಟು ಅವಸರ ! ಪುಸ್ತಕ ತಯಾರಾಗುವಾಗಲೇ ಯಾರ ಮುನ್ನುಡಿ, ಹಿನ್ನುಡಿ, ಬೆನ್ನುಡಿ ಎಂಬ ಚರ್ಚೆ. ಒಮ್ಮೆ ಪುಸ್ತಕ ತಯಾರಾಯಿತೆಂದರೆ, ಪುಸ್ತಕ ಬಿಡುಗಡೆ ಯಾರಿಂದ?, ಎಲ್ಲಿ, ಎಷ್ಟು ಹೊತ್ತಿಗೆ, ಯಾವ ದಿವಸ?ಒಂದೊಮ್ಮೆ ವಾರದ ದಿನಗಳಲ್ಲಿ ಆದರೆ ಬರುವವರಾರು ಎಂಬುದು ಒಂದು ಪ್ರಶ್ನೆಯಾದರೆ, ರಜಾ ದಿನಗಳಲ್ಲಾದರೆ, ವಾರದಲ್ಲಿ ಸಿಗುವ ಒಂದೇ ಒಂದು ರಜೆಯನ್ನೂ ಹಾಳುಗೆಡವಿಕೊಳ್ಳಲು ಎಷ್ಟು ಜನ ತಯಾರಿದ್ದಾರು ಎಂಬ ಸಂಶಯ. ಒಟ್ಟಾರೆ ಗೊಂದಲವೇ ಗೊಂದಲ.

ಇದಕ್ಕೂ ಪರಿಹಾರ ಎಂಬಂತೆ ಬೆಳಗಿನ ಉಪಹಾರದಿಂದ ಪ್ರಾರಂಭಗೊಂಡು ಮಧ್ಯಾಹ್ನದ ಊಟದೊಂದಿಗೆ ಮುಕ್ತಾಯ ಎಂದು ನಿರ್ಧರಿಸಿ 'ಬೆಳಗಿನ ಉಪಹಾರ ನಮ್ಮೊಂದಿಗೆ' ಅಂತ ಆಮಂತ್ರಣ ಪತ್ರಿಕೆಯಲ್ಲೇ ಪ್ರಕಟಿಸಿ, ಒಂದಿಷ್ಟು ಸಭಿಕರನ್ನು ಖಾತ್ರಿಮಾಡಿಕೊಳ್ಳುವುದು.

ಅಂತೂ ಆಮಂತ್ರಣ ತಯಾರಾಗಿ, ಪುಸ್ತಕ ಬಿಡುಗೆಯ ಕಾರ್ಯಕ್ರಮವೂ ನಿಗದಿಯಾಗಿ, ಪುಸ್ತಕ ಬಿಡುಗಡೆ ಮಾಡುವವರ ಮತ್ತು ಪುಸ್ತಕದ ಬಗ್ಗೆ ಮಾತನಾಡುವವರ ಹೆಸರುಗಳು ಅಂತಿಮ ಆಯಿತೆಂದುಕೊಳ್ಳಿ. ಒಂದೊಮ್ಮೆ ಪುಸ್ತಕ ಬಿಡುಗಡೆ ಮಾಡುವವರು ಹಿರಿಯ ರಾಜಕೀಯ ನಾಯಕರೊಬ್ಬರಾಗಿ, ತುರ್ತು ಪರಿಸ್ಥಿತಿ ಕಾಲದಲ್ಲಿ ಜೈಲಿಗೆ ಹೋಗಿ ಬಂದವರಾದರಂತೂ ಮುಗಿದೇಹೋಯಿತು ಕಥೆ ! ಅವರು ಅಂತಿಮವಾಗಿ ರಜಾದಿನ ಬೆಳಿಗ್ಗೆ ಕಾರ್ಯಕ್ರಮ ಪ್ರಾರಂಭಿಸಿ ಒಂದು ಗಂಟೆಯೊಳಗೆ ಮುಗಿಸಿದರೆ ಉತ್ತಮ ಎಂಬ ತೀರ್ಮಾನಕ್ಕೆ ಬಂದರೂ ಕೆಲ ಸಮಸ್ಯೆಗಳು ಹಾಗೇ ಉಳಿದುಕೊಂಡು ಬಿಡುತ್ತವೆ. ಉಪಹಾರ ಇಡುವುದೋ, ಊಟ ಇಡುವುದೋ? ಭಾಷಣ ಪ್ರಾರಂಭಿಸುವುದೇ ಬಿಡುಗಡೆ, ಪದವೇ ಎಷ್ಟೊಂದು ರೋಮಾಂಚನಕಾರಿ, ಉತ್ಸಾಹದಾಯಕ, ಚೇತೋಹಾರಿ, ಮನಸ್ಸಿಗೆ ಆನಂದ ಕೊಡುವಂತಹುದು. ತಾನೂ ಎಮರ್ಜನ್ಸಿ ಸಮಯ ಜೈಲು ಸೇರಿ ಬಿಡುಗಡೆಯಾಗಿ ಬಂದವನೇ. ಹೀಗಾಗಿ ಎಲ್ಲೇ ಯಾರಾದರೂ 'ಬಿಡುಗಡೆ' ಕಾರ್ಯಕ್ರಮಕ್ಕೆ ಕರೆದರೆ ಎಂದೂ ಒಲ್ಲೆ ಎಂದಿಲ್ಲ. ಕಾರಣ, ಅದು ತನಗೆ ಅಷ್ಟೊಂದು ಅಪ್ಯಾಯಮಾನವಾದದ್ದು ಎಂತ ಹೇಳಿ, ಅಂತ್ಯದಲ್ಲಿ ತಾವು ಬಿಡುಗಡೆ ಮಾಡಲಿರುವ ಪುಸ್ತಕದ ಬಗ್ಗೆ ಎರಡೇ ಎರಡು ಮಾತಾಡಿ ವಿಶ್ರಮಿಸಿ ಬಿಡುವುದು.

ಇನ್ನೂ ಕೆಲ ಸಂದರ್ಭ ಈ ಬಿಡುಗಡೆ ಎಂಬುದು ನಮ್ಮ ಚಿತ್ತ ಎಳೆಯುತ್ತದೆ. ಏನೋ ಅಪರಾಧ ಮಾಡಿ, ಜೈಲು ಸೇರಿ, ಜಾಮೀನಿನ ಮೇಲೆ ಬಿಡುಗಡೆಯಾಗಿ ಹೊರ ಬಂದರೂ, ಅಂಥವರನ್ನು ಹಾರ-ತುರಾಯಿ ಗಳೊಂದಿಗೆ ಸ್ವಾಗತಿಸುವುದು! ಬಿಡುಗಡೆಯ ವ್ಯಾಪ್ತಿ ಇಷ್ಟಕ್ಕೇ ಮುಗಿಯದು. ಕೆಲ ಸಭೆ ಸಮಾರಂಭಗಳಲ್ಲಿ ವೇದಿಕೆ ಅಲಂಕರಿಸಿದವರು, ಅದೇ ವೇದಿಕೆ ಹಂಚಿಕೊಂಡ ಇತರೇ ಮಹಾನುಭಾವರ ಭಾಷಣದ ಕೊರೆಯುವಿಕೆಯನ್ನು ಸಹಿಸಲಾಗದೇ ಎಷ್ಟು ಹೊತ್ತಿಗೆ ಇಲ್ಲಿಂದ ಬಿಡುಗಡೆ ಆದೀತು ಎಂಬ ಲೆಕ್ಕಾಚಾರದಲ್ಲೇ ಇರುವುದು. ಇನ್ನು ಕೆಲವರ ಮನೆಗೆ ಹೋದಾಗಲೂ, ಅವರಿಂದ ಆದಷ್ಟು ಬೇಗ ಬಿಡುಗಡೆಯಾಗಿ ಹೊರಬರಬೇಕೆಂದು ಅನಿಸುವುದು. ಇವೆಲ್ಲಕ್ಕೂ ಹೊರತಾಗಿ ಇನ್ನೂ ಕೆಲವರಿರುತ್ತಾರೆ. ಈ ಬದುಕಿನಲ್ಲೇ ಆಸಕ್ತಿ ಕಳೆದುಕೊಂಡು, ಬಸವಳಿದು, ಬೆಂಡಾಗಿ, ಎಂದು ಈ ಬದುಕಿನಿಂದಲೇ ಬಿಡುಗಡೆ ಸಿಗುತ್ತದೋ ಅಂತ ಹವಣಿಸುತ್ತಿರುವವರು!

ಇನ್ನು ಕೆಲ ಕಚೇರಿಗಳಲ್ಲೂ, ಬಾಸ್ ಎಂಬವರಿಂದ ಬಿಡುಗಡೆ ಪಡೆಯುವುದು. ಹದಿಹರೆಯದವರಿಗೆ ಪಾಲಕರಿಂದ ಬಿಡುಗಡೆಯಾಗಿ ಎಂದು ತಮಗಿಷ್ಟ ಬಂದಂತೇ ಬದುಕಬಹುದೆಂಬ ನಿರೀಕ್ಷೆ. ಸದಾ ಜಗಳಗಳಲ್ಲೇ ಸಮಯ ಕಳೆಯುತ್ತಿರುವವರೂ, ಈ ಕೋರ್ಟ್-ಕಚೇರಿ ವ್ಯವಹಾರದಿಂದ ಎಂದು ಬಿಡುಗಡೆ ಸಿಕ್ಕೀತೋ ಎಂದು ಗೊಣಗುವುದು.

ಕೆಲವರಿಗೆ ಸಂಸಾರದ ಜಂಜಾಟದಿಂದ ಬಿಡುಗಡೆ ಬೇಕಿದ್ದರೆ, ಇನ್ನು ಕೆಲವರಿಗೆ ರೋಗ-ರುಜಿನೆ, ಸಂಕಟ, ಪೀಡೆಗಳಿಂದ ಬಿಡುಗಡೆ. ಒಂದಂತೂ ಸ್ಪಷ್ಟ. ಈ ಬಿಡುಗಡೆ ಎಂಬುದು ಸದಾ ಒಳಿತಿಗಾಗಿಯೇ ಇರುವಂತಹುದು ! ❍

# ಸಂಕ್ಷಿಪ್ತ ಸುದ್ದಿಗಳು

## ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ವಿಚಾರ ಸಂಕಿರಣ : ಒಗಟು ಜಾನಪದ ಸಾಹಿತ್ಯದ ಕಣಜವಿದ್ದಂತೆ : ನಂದಳಿಕೆ ನಾರಾಯಣ ಶೆಟ್ಟಿ



ಎಲ್ಲ ಭಾಷೆ, ಪ್ರಾಂತ್ಯ, ಜನಾಂಗಗಳಲ್ಲಿ 'ಒಗಟು' ಸ್ಥಾನ ಪಡೆದಿದೆ. ಹಾಗೇ ಒಗಟು ಜಾನಪದ ಸಾಹಿತ್ಯದ ಕಣಜವಿದ್ದಂತೆ. ಬುದ್ಧಿಶಕ್ತಿ ಹೆಚ್ಚಿಸುವುದರೊಂದಿಗೆ ಭಾಷಾ ಜ್ಞಾನ, ವ್ಯಾವಹಾರಿಕ ಜ್ಞಾನ ಹೆಚ್ಚಿಸುವ ಒಗಟು ಮನೋರಂಜನೆಗೆ ವೇದಿಕೆಯಾಗಿಯೂ ಬಳಕೆಯಾಗುತ್ತಿತ್ತು. ದೊಡ್ಡ ವಿಷಯವನ್ನು ಸೂಕ್ಷ್ಮವಾಗಿ ಹೇಳುವುದೇ ಒಗಟು. ಕೆಲ ಕ್ಲಿಷ್ಟ ಸಮಸ್ಯೆಗೆ ಒಗಟು ಪರಿಹಾರ ನೀಡುವುದೂ ಇದೆ. ಮೇಲ್ನೋಟಕ್ಕೆ ರಹಸ್ಯಮಯವಾಗಿ ಕಾಣುವ ಒಗಟು ಮಕ್ಕಳ ಕುತೂಹಲ ಹೆಚ್ಚಿಸುವುದರೊಂದಿಗೆ ಹಿರಿಯರಿಗೆ ಕಾಲಕ್ಷೇಪವಾಗಿ ಆಸಕ್ತರಿಗೆ ಮನೋರಂಜನೆಯಾಗಿ ಸಮಾಜದ ಅಂಕು ಡೊಂಕು ತಿದ್ದುವಲ್ಲಿ ತನ್ನದೇ ಆದ ಕೊಡುಗೆ ನೀಡಿರುವ ಒಗಟು ಭಾಷೆಯ ಬೆಳವಣಿಗೆಗೂ ಸಹಕಾರಿಯಾದ ಜಾನಪದ ಸಾಹಿತ್ಯ ಪ್ರಕಾರ. ಮೌಖಿಕ ರೂಪದಲ್ಲಿರುವ ಇದು ಜನರ ಬಾಯಿಂದ ಬಾಯಿಗೆ ತಲುಪಿ ತನ್ನತನವನ್ನು ಉಳಿಸಿಕೊಳ್ಳಲು ಸಾಧ್ಯ ಎಂದು ದಿನಾಂಕ 10.12.23ರ ರವಿವಾರ ಇಳಿಹೊತ್ತು 3.30 ರಿಂದ ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನವು ಕನ್ನಡ ವೆಲ್ಫೇರ್ ಸೊಸಾಯಿಟಿ ಘಾಟ್ಕೋಪರ್ ಇಲ್ಲಿ ಹಮ್ಮಿಕೊಂಡ 'ಒಗಟುಗಳು ಹಾಗೂ ಜಾನಪದ ವೈವಿಧ್ಯ' ಎಂಬ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ ನಾರಾಯಣ ಶೆಟ್ಟಿ ನಂದಳಿಕೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಅದಲ್ಲದೆ ಚಿಕ್ಕ ಹಾಗೂ ಚೊಕ್ಕದಾಗಿ ಜಾನಪದ ರೂಪದಲ್ಲೇ ಕಾರ್ಯಕ್ರಮ ಸಂಘಟಿಸಿದ ಪ್ರತಿಷ್ಠಾನದ ಕಾರ್ಯವನ್ನು ಶ್ಲಾಘಿಸಿದರು.

ಅಭ್ಯಾಗತರಾಗಿ ಆಗಮಿಸಿದ್ದ ಹಿರಿಯ ರಂಗತಜ್ಞ ಡಾ। ಪ್ರಭು ಅಂಗಡಿ ತಮ್ಮ ವಿಚಾರ ಮಂಡಿಸುತ್ತಾ ಜಾನಪದದ ಅನೇಕ ಪ್ರಕಾರಗಳಲ್ಲಿ ಒಗಟು ಪ್ರಮುಖವಾದದ್ದು. ಒಂದು ವಸ್ತುವನ್ನು ಇನ್ನೊಂದು ವಸ್ತುವಿನ ಮೂಲಕ ಮೋಡಿಯ ಮಾದರಿಯಲ್ಲಿ ರಚಿಸಿ ಅದರಲ್ಲಿ ಅಡಕವಾಗಿರುವ ಅವ್ಯಕ್ತ ವಸ್ತುವನ್ನು ಕಂಡು ಹಿಡಿಯುವಂತೆ ಕೇಳಿಕೊಳ್ಳುವ ಒಂದು ಪ್ರಕಾರ ಒಗಟು. ಒಗಟಿನಲ್ಲಿ ಎರಡು ಸಮರೂಪದ ವಸ್ತುಗಳಿರಬೇಕು. ಒಂದು ಉಪಮಾನ ಇನ್ನೊಂದು ಉಪಮೇಯ. ಉಪಮಾನ ಅವಾಚ್ಯವಾಗಿರುತ್ತದೆ. ಉಪಮೇಯ ನಿಗೂಢವಾಗಿ ಅಂದರೆ ಗುಟ್ಟಾಗಿರುತ್ತದೆ. ಅದನ್ನು ರಟ್ಟು ಮಾಡುವಂತೆ ಕೇಳಿಕೊಳ್ಳುವುದೇ ಒಗಟು. ಈ ಒಗಟುಗಳು ಕಾಲಕ್ಕೆ ತಕ್ಕಂತೆ ಬದಲಾಗುತ್ತಲೂ ಇರುತ್ತವೆ ಎಂದು ಉದಾಹರಣೆ ಮೂಲಕ ವಿವರಿಸಿದರು.

ಇನ್ನೋರ್ವ ಅಭ್ಯಾಗತರಾದ ಶ್ರೀಮತಿ ಲತಾ ಸಂತೋಷ ಮುದ್ದುಮನೆ ಒಗಟು ಹಾಗೂ ಜಾನಪದ ವೈವಿಧ್ಯತೆ ಕುರಿತು ವಿವರಿಸುತ್ತ ಪ್ರಕೃತಿಯಲ್ಲಿರುವ ಒಳ್ಳೆಯದೆಲ್ಲವನ್ನು ಅರಳಿಸಿ, ಬೆಳಗಿಸಲು ಪ್ರಯತ್ನಿಸುತ್ತಿದ್ದ ನಮ್ಮ ಪೂರ್ವಜರು ಮುಂಜಾನೆ ಮೂಡಣ ದಿಕ್ಕಿನಲ್ಲಿ ಮೂಡುವ ಸೂರ್ಯನಿಗೆ ಕೈ ಜೋಡಿಸಿ ವಂದಿಸಿದ ಮೇಲೆ ಪದ ಕಟ್ಟಿ ಹಾಡಿ ಕುಣಿಯುವ ಜನಪದರ ಬದುಕು ನಿತ್ಯನೂತನವಾಗಿತ್ತು. ಅವರ ನಿತ್ಯದ ಅನುಭವೇ ಜಾನಪದ. ಜನರನ್ನು, ಸಮಾಜವನ್ನು ಒಟ್ಟುಗೂಡಿಸುವ ಶಕ್ತಿ ಅವರಿಗಿತ್ತು ಎಂಬ ಅನಿಸಿಕೆ ವ್ಯಕ್ತಪಡಿಸಿದರು. ಇನ್ನೋರ್ವ ಅಭ್ಯಾಗತರಾದ ಶ್ರೀಮತಿ ಸರೋಜಾ ಅಮಾತಿ ತಮ್ಮ ಅನಿಸಿಕೆ ವ್ಯಕ್ತಪಡಿಸುತ್ತ ತಮ್ಮ ಬಾಲ್ಯ ಹಾಗೂ ಹಿರಿಯರೊಂದಿಗಿನ ಒಡನಾಟವನ್ನು ನೆನಪಿಸುತ್ತ ಉತ್ತರ ಕರ್ನಾಟಕದ ಜಾನಪದದ ವಿವಿಧ ಪ್ರಕಾರವನ್ನು ವಿವರಿಸಿದರು. ಸಾಂಕೇತತೆಯಲ್ಲಿ ಅಭಿವ್ಯಕ್ತಿಗೊಂಡ ಸಂಕ್ಷಿಪ್ತ ಕಾವ್ಯವೇ 'ಒಗಟು'. ಕೃಷಿಕರ ಬದುಕು ಜನಪದದೊಂದಿಗೆ ಬೆರೆತಿದೆ. ಪ್ರಕೃತಿಯ ಮಣ್ಣಿನೊಂದಿಗೆ ಯಾರು ನಿಕಟವಾಗಿರುತ್ತಾರೋ ಅವರು ಜಾನಪದವನ್ನು ಸವಿಯುತ್ತಾರೆ, ಪ್ರಕೃತಿಯಲ್ಲಿನ ಪ್ರತಿಯೊಂದನ್ನು ಗೌರವಿಸಿ ಅವುಗಳ ಮಹತ್ವವನ್ನು ಕಿರಿಯರಿಗೆ ತಲುಪಿಸಿ ಸಮಾಜಕ್ಕೆ ಪ್ರಕೃತಿಯ ಮಹತ್ವ ತಿಳಿಸುವಲ್ಲಿ ಯಶಸ್ವಿಯಾಗುತ್ತಿದ್ದರು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಇನ್ನೋರ್ವ ಅಭ್ಯಾಗತರಾದ ಶ್ರೀಮತಿ ಇಂದಿರಾ ಕುಲಕರ್ಣಿ ಅವರು ತಾತ-ಮುತ್ತಾತ, ಅಜ್ಜಿ-ಮುತ್ತಜ್ಜಿಯರಿಂದ ಬಂದ ಈ ಜಾನಪದ ಸಂಸ್ಕೃತಿಯಲ್ಲಿ ಬುದ್ಧಿ ಅಳೆಯುವ ಗುಣವಿದೆ. ಇದರಲ್ಲಿ ಗಣಿತವಿದೆ, ಇತಿಹಾಸವಿದೆ. ವಿಜ್ಞಾನವಿದೆ, ಪ್ರಕೃತಿಯು ಸೊಬಗಿದೆ. ಇದನ್ನು ಬಳಸಿ - ಉಳಿಸುವತ್ತ ಗಮನಹರಿಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಕನ್ನಡ ವೆಲ್ಫೇರ್ ಸೊಸಾಯಿಟಿಯ ಅಧ್ಯಕ್ಷರಾದ ಶ್ರೀ ನವೀನ್ ಶೆಟ್ಟಿ ಇನ್ನ ಬಾಳಿಕೆ ನಾಡು-ನುಡಿ ಸೇರಿದಂತೆ ಜನ-ಪರ ಕಾರ್ಯಗಳಿಗೆ ನಮ್ಮ ಸೊಸಾಯಿಟಿ ಸದಾ ಸ್ಪಂದಿಸುತ್ತದೆ. ಇಂದು ವಿನೂತನ ಕಾರ್ಯಕ್ರಮ ಹಮ್ಮಿಕೊಂಡ ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನದ ಕಾರ್ಯ ಚಟುವಟಿಕೆ ಶ್ಲಾಘನೀಯ ಎಂದರು. ವೇದಿಕೆಯಲ್ಲಿ ಡಾ। ಸತೀಶ ಬಂಗೇರ ಉಪಸ್ಥಿತರಿದ್ದರು. ಪ್ರತಿಷ್ಠಾನದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ವಿ. ಆರ್. ಭಟ್, ಅತಿಥಿ ಅಭ್ಯಾಗತರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಪ್ರತಿಷ್ಠಾನದ ಕಾರ್ಯಕಾರಿ ಸಮಿತಿಯ ಸದಸ್ಯರಾದ ರಾಜ್ ವರ್ಮ ಜೈನ್, ನಿತ್ಯ ಮುಂಡ್ಕೂರ ಸಹಕರಿಸಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಇತ್ತೀಚೆಗೆ ನಮ್ಮನ್ನಗಲಿದ ಪ್ರತಿಷ್ಠಾನದ ಹಿತೈಷಿ, ಸಂಘಟಕ ಶೇಖರ ಅಜೆಕಾರ್ ಅವರನ್ನು ನೆನೆದು ಒಂದು ನಿಮಿಷದ ಮೌನಾಚರಣೆ ಮೂಲಕ ಸದ್ಗತಿ ಕೋರಲಾಯಿತು.

ಶ್ರೀಮತಿ ಮಾಲತಿ ಪುತ್ರನ್ ಸಂಗಡಿಗರು ಹಾಗೂ ಕನ್ನಡ ವೆಲ್ಫೇರ್ ಸೊಸಾಯಿಟಿಯ ಮಹಿಳಾ ವಿಭಾಗದ ಸದಸ್ಯೆಯರಲ್ಲದೆ ಶ್ರೀಕಾಂತ ಅಮಾತಿ ಅವರು ಗೀತ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ಶ್ರೀಮತಿ ವೀಣಾ ಶೆಟ್ಟಿಯವರ ಪ್ರಾರ್ಥನೆ ಹಾಗೂ ಅತಿಥಿಗಳು ಜ್ಯೋತಿ ಬೆಳಗಿಸುವುದರೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಶ್ರೀಮತಿ ಸವಿತಾ ಎಸ್. ಶೆಟ್ಟಿ ಅತಿಥಿ ಅಭ್ಯಾಗತರನ್ನು ಸ್ವಾಗತಿಸಿದರು. ಪ್ರತಿಷ್ಠಾನದ ಸಂಸ್ಥಾಪಕ ಹಾಗೂ ಗೌ. ಪ್ರ. ಕಾರ್ಯದರ್ಶಿ ವಿಶ್ವನಾಥ ದೊಡ್ಮನೆ ಪ್ರತಿಷ್ಠಾನದ ಕಾರ್ಯ ಚಟುವಟಿಕೆ ಕುರಿತು ವಿವರಿಸಿದರಲ್ಲದೆ ಇಂದಿನ ಒಗಟು ಹಾಗೂ ಜಾನಪದ ವೈವಿಧ್ಯತೆ ಕಾರ್ಯಕ್ರಮದ ಕುರಿತು ವಿವರಿಸಿದರು. ಶ್ರೀಮತಿ ಲಕ್ಷ್ಮೀ ಹೇರೂರ ಕಾರ್ಯಕ್ರಮ ನಿರೂಪಣೆ ಮಾಡಿದರು.

*PAGE DONATED BY :* ***SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT***

## ವ್ಯಾಸರಾಯ ಬಲ್ಲಾಳ ಕಥಾಸ್ಪರ್ಧೆಯ ಫಲಿತಾಂಶ ಪ್ರಕಟ

ವ್ಯಾಸರಾಯ ಬಲ್ಲಾಳ ಶತಮಾನೋತ್ಸವದ ಅಂಗವಾಗಿ ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗ ಹಾಗೂ ವ್ಯಾಸರಾಯ ಬಲ್ಲಾಳ ಪ್ರತಿಷ್ಠಾನ ಆಯೋಜಿಸಿದ್ದ ಜಾಗತಿಕ ಮಟ್ಟದ ಕಥಾ ಸ್ಪರ್ಧೆಯ ಫಲಿತಾಂಶ ಪ್ರಕಟವಾಗಿದ್ದು ಸುನೀತಾ ಪ್ರಕಾಶ್, ದಾವಣಗೆರೆ ಅವರ 'ಪದ್ದವ್ವ ಮತ್ತು ಕೌದಿ' ಕತೆ ಪ್ರಥಮ ಬಹುಮಾನವನ್ನು ಪಡೆದಿದೆ. ಗೀತಾ ಕುಂದಾಪುರ ಅವರ 'ಬಾಬಕ್ಕ' ಕತೆ ಎರಡನೆಯ ಬಹುಮಾನವನ್ನು ಹಾಗೂ ಸುವ್ರತಾ ಅಡಿಗ, ಬೆಂಗಳೂರು ಅವರ 'ಕನಸುಗಳಿಗೆ ಅರ್ಥ ಹುಡುಕುತ್ತಾ' ಕತೆ ಮೂರನೆಯ ಬಹುಮಾನವನ್ನು ಪಡೆದುಕೊಂಡಿದೆ.

ಡಾ. ಗುರುರಾಜ. ಎಸ್. ಬೆಂಗಳೂರು ಅವರ 'ಗೊತ್ತಿಲ್ಲದ ನೆಂಟ' ಹಾಗೂ ಸುಮಾ ಸುರೇಶ್, ಹಾಸನ ಅವರ 'ಹಸಿವೆಗೊಂದಿಷ್ಟು ಮುಖಗಳು' ಬಹುಮಾನ ರಹಿತ ಮೆಚ್ಚುಗೆ ಪಡೆದ ಕತೆಗಳು ಎಂದು ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಹಾಗೂ ವ್ಯಾಸರಾಯ ಬಲ್ಲಾಳ ಪ್ರತಿಷ್ಠಾನದ ಅರವಿಂದ ಬಲ್ಲಾಳ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಥಾಸ್ಪರ್ಧೆಯ ತೀರ್ಪುಗಾರರಾಗಿ ಖ್ಯಾತ ಕತೆಗಾರರು, ಕಾದಂಬರಿಕಾರರಾದ ಮಿತ್ರಾ ವೆಂಕಟ್ರಾಜ್ ಅವರು ಸಹಕರಿಸಿದರು.

## ಮುಂಬೈ ವಿವಿ ಕನ್ನಡ ವಿಭಾಗ, ಕೇಂದ್ರ ಸಾಹಿತ್ಯ ಅಕಾಡೆಮಿ ನವದೆಹಲಿ ಮತ್ತು ವ್ಯಾಸರಾಯ ಬಲ್ಲಾಳ ಪ್ರತಿಷ್ಠಾನ ಮುಂಬೈ : ವ್ಯಾಸರಾಯ ಬಲ್ಲಾಳ ಶತಮಾನೋತ್ಸವ ಸಂಭ್ರಮ ಮತ್ತು ವ್ಯಾಸರಾಯ ಬಲ್ಲಾಳ ಪ್ರಶಸ್ತಿ ಪ್ರದಾನ ಬದುಕಿನ ಪಥದ ಕುರಿತಾಗಿ ತಮ್ಮ ಕತೆಗಳಲ್ಲಿ ಬರೆದವರು ವ್ಯಾಸರಾಯ ಬಲ್ಲಾಳರು : ಡಾ. ಕೃಷ್ಣಮೂರ್ತಿ ಹನೂರ

ಮುಂಬೈ, ವ್ಯಾಸರಾಯ ಬಲ್ಲಾಳ, ಯಶವಂತ ಚಿತ್ತಾಲ ಅವರಂತಹ ದೊಡ್ಡ ದೊಡ್ಡ ಲೇಖಕರೆಲ್ಲ ತಮ್ಮ ಬರಹಗಳಲ್ಲಿ ಬದುಕಿನ ಪ್ರಯಾಣದ ಕುರಿತಾಗಿ ನಿರಂತರವಾಗಿ ಬರೆಯುತ್ತಾರೆ. ಬಲ್ಲಾಳರು ತಮ್ಮ ಕೃತಿಗಳಲ್ಲಿ ತಮ್ಮ ತೊಳಲಾಟಗಳನ್ನು, ಪಯಣವನ್ನು, ಅನುಭವಗಳನ್ನು ಬರೆಯುತ್ತಾ ಅದರ ಮೂಲಕ ಓದುಗರನ್ನು ಜಾಗೃತಗೊಳಿಸುವ ಮತ್ತು ಬದುಕಿನ ಪಥದಲ್ಲಿ ಒಳ್ಳೆಯದನ್ನು ಗುರುತಿಸುವ ಪ್ರಯತ್ನವನ್ನು ಮಾಡುತ್ತಾರೆ. ಕ್ಷಮಿಸುವುದರಲ್ಲಿಯೇ ಘನತೆ, ದೊಡ್ಡಸ್ತಿಕೆ ಇದೆಯೆಂಬ ಭಾವ ಅವರ ಎಲ್ಲಾ ಕತೆಗಳಲ್ಲಿ ಓತಪ್ರೋತವಾಗಿ ಹರಿದಿದೆ. ಅವರು ಹೇಳುವ ಕತೆಗಳು ಬರಿಯ ಘಟನೆಗಳಾಗದೆ ರೂಪಕಗಳಾಗಿವೆ ಎಂದು ಹಿರಿಯ ಸಾಹಿತಿ ಪ್ರೊ. ಕೃಷ್ಣಮೂರ್ತಿ ಹನೂರ ಅವರು ಅಭಿಪ್ರಾಯಪಟ್ಟರು. ಅವರು ಡಿ. ೧ ರಂದು ಮುಂಬೈ ವಿವಿ ಕನ್ನಡ ವಿಭಾಗ, ಕೇಂದ್ರ ಸಾಹಿತ್ಯ ಅಕಾಡೆಮಿ ನವದೆಹಲಿ ಮತ್ತು ವ್ಯಾಸರಾಯ ಬಲ್ಲಾಳ ಪ್ರತಿಷ್ಠಾನ ಮುಂಬೈ ಇವರ ಸಂಯುಕ್ತ ಆಯೋಜನೆಯಲ್ಲಿ ಕಲೀನಾ ಕ್ಯಾಂಪಸ್‌ನ ಜೆ. ಪಿ. ನಾಯಕ್ ಭವನದಲ್ಲಿ ನಡೆದ 'ವ್ಯಾಸರಾಯ ಬಲ್ಲಾಳ ಶತಮಾನೋತ್ಸವ' ಸಂಭ್ರಮ ಕಾರ್ಯಕ್ರಮದಲ್ಲಿ ವ್ಯಾಸರಾಯ ಬಲ್ಲಾಳ ಜೊಚ್ಚಲ 'ಕತಾ ಪ್ರಶಸ್ತಿ' ಸ್ವೀಕರಿಸಿ ಮಾತನಾಡಿದರು. ಅವರು ಅಂದು 'ಕತೆಗಾರರಾಗಿ ವ್ಯಾಸರಾಯ ಬಲ್ಲಾಳ' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.


ಕರ್ನಾಟಕದಲ್ಲಿ ಕನ್ನಡ ಭಾಷೆ ಸೊರಗುತ್ತಿರುವ ಸಂದರ್ಭದಲ್ಲಿ ಮುಂಬೈ ವಿವಿ ಕನ್ನಡ ವಿಭಾಗದಿಂದ ಇಷ್ಟೊಂದು ಕನ್ನಡ ಕೈಂಕರ್ಯಗಳು, ಪ್ರಕಟಣೆಗಳು ಆಗುತ್ತಿರುವುದು ತನಗೆ ಕುತೂಹಲ ಮತ್ತು ಅಭಿಮಾನ ಮೂಡಿಸಿದೆ. ಬಲ್ಲಾಳರ ಶತಮಾನೋತ್ಸವ ಸಮಾರಂಭವನ್ನು ಆಯೋಜಿಸಿರುವ ಕನ್ನಡ ವಿಭಾಗ ಮತ್ತು ಬಲ್ಲಾಳರ ಕುಟುಂಬ ವರ್ಗವನ್ನು ಶ್ಲಾಘಿಸಿದ ಡಾ. ಹನೂರ ಅವರು ಹಿರಿಯರನ್ನು ನೆನಪಿಸಿ ಅಂತಹವರ ಸಂಗದಲ್ಲಿ ಕಲಿತಿರುವುದನ್ನು ಮುಂದಿನ ಪರಂಪರೆಗೆ ಹೇಳುವುದು ಮುಖ್ಯ ಎಂದರು.

'ವ್ಯಾಸರಾಯ ಬಲ್ಲಾಳ ಕಾದಂಬರಿ ಪ್ರಶಸ್ತಿ'ಯನ್ನು ಸ್ವೀಕರಿಸಿ ಮಾತನಾಡಿದ ಕನ್ನಡದ ಖ್ಯಾತ ವಿಮರ್ಶಕ, ಕಾದಂಬರಿಕಾರ ಡಾ. ಬಿ. ಜನಾರ್ದನ ಭಟ್ ಅವರು 'ಕಾದಂಬರಿಕಾರರಾಗಿ ಬಲ್ಲಾಳರು' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ವ್ಯಾಸರಾಯ ಬಲ್ಲಾಳ ಅವರು ತಮ್ಮ ಕಾದಂಬರಿಗಳಲ್ಲಿ ಎರಡು ತಲೆಮಾರುಗಳ ಹಿಂದಿನ ಮುಂಬಯಿಯ ದರ್ಶನ ಮಾಡಿಸಿದ್ದರು. ಕನ್ನಡ ಸಾಹಿತ್ಯಕ್ಕೆ ಜಾಗತಿಕವಾಗಿಯೂ ಮುಖ್ಯವಾದ ಕೊಡುಗೆ ನೀಡಿರುವ ಅವರು ನವ್ಯರಿಗಿಂತ ಮುಂಚೆಯೇ ನವ್ಯ ಕಾದಂಬರಿಗಳನ್ನು ಬರೆದವರು. ಅವರು ಶ್ರದ್ಧೆಯಿಂದ, ತಪಸ್ಸಿನ ಹಾಗೆ ಸಮಾಜವನ್ನು ಅಭ್ಯಾಸ ಮಾಡಿ ಪ್ರತಿಯೊಂದು ಕಾದಂಬರಿಯನ್ನೂ ಬರೆದವರು. ಕನ್ನಡ ಕಾವ್ಯಕ್ಕೆ ಗೋಪಾಲಕೃಷ್ಣ ಅಡಿಗರು ಹೇಗೋ ಹಾಗೆ ಕನ್ನಡ ಕಾದಂಬರಿಗಳ ಮಾರ್ಗದರ್ಶಕ ಎಂದು ಅವರನ್ನು ಕರೆಯಬಹುದು. ಅವರ ಎಂಟೂ ಕಾದಂಬರಿಗಳು ಕನ್ನಡದ ಪಥದರ್ಶಕ ಕಾದಂಬರಿಗಳು ಎಂದು ಅವರು ಕೊಂಡಾಡಿದರು. ಡಾ. ಭಟ್ ಅವರು ವ್ಯಾಸರಾಯ ಬಲ್ಲಾಳ ಅವರ ಎಲ್ಲ ಕಾದಂಬರಿಗಳನ್ನು ವಿಶ್ಲೇಷಿಸಿ, ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮುಂಬೈ ವಿವಿ ಕನ್ನಡ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರೂ ಆದ ಡಾ. ಜಿ. ಎನ್. ಉಪಾಧ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಸರ್ವ ಕುತೂಹಲಿಯಾಗಿ ಅನೇಕ ನೆಲೆಗಳಲ್ಲಿ ಕನ್ನಡ ಸಾಹಿತ್ಯವನ್ನು ಸಂಪನ್ನಗೊಳಿಸಿದವರು ವ್ಯಾಸರಾಯ ಬಲ್ಲಾಳರು. ಮುಂಬೈ ಬಲ್ಲಾಳರ ಕರ್ಮಭೂಮಿ. ಈ ನಗರದ ಸಂಘರ್ಷದಲ್ಲಿ ಜೀವಂತಿಕೆಯ ಬೆಳಕನ್ನು ಕಂಡವರು ಅವರು. ಐದು ದಶಕಗಳ ಕಾಲ ಮುಂಬೈಯಲ್ಲಿ ನೆಲೆಸಿ ಸಾಕ್ಷಿಪ್ರಜ್ಞೆಯಾಗಿ ಕನ್ನಡವನ್ನು ಬೆಳೆಸಿದವರು. ಜನಪ್ರಿಯ ಕಾದಂಬರಿಕಾರರಾಗಿ, ಕತೆಗಾರರಾಗಿ, ಸತ್ವಶಾಲಿ ಅಂಕಣಕಾರರಾಗಿ, ವಿಚಾರಸಾಹಿತ್ಯದ ನಿರ್ಮಾಪಕರಾಗಿ, ಪತ್ರಿಕೋದ್ಯಮಿಯಾಗಿ ಆಧುನಿಕ ಕನ್ನಡ ಸಾಹಿತ್ಯಕ್ಕೆ ನೂತನ ಆಯಾಮ ನೀಡಿದ ವ್ಯಾಸರಾಯ ಬಲ್ಲಾಳ ಅವರು ವಿಭಾಗದ ಸ್ಥಾಪನೆಯಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸಿದವರು ಎಂದು ಬಲ್ಲಾಳರನ್ನು ನೆನಪಿಸಿಕೊಂಡರು.

*PAGE DONATED BY : **SHRI A. K. BHAT, CHITRIGI & FAMILY***




'ವ್ಯಾಸರಾಯ ಬಲ್ಲಾಳ ಅತ್ಯುತ್ತಮ ವಿದ್ಯಾರ್ಥಿ ಪುರಸ್ಕಾರ'ವನ್ನು ಮುಂಬೈ ವಿವಿ ಕನ್ನಡ ವಿಭಾಗ ಎಂ. ಎ. ದ್ವಿತೀಯ ವರ್ಷದ ವಿದ್ಯಾರ್ಥಿ ವಿದ್ಯಾ ರಾಮಕೃಷ್ಣ ಅವರಿಗೆ ನೀಡಲಾಯಿತು. ಸನ್ಮಾನಿತರಿಗೆ ಶಾಲು, ಫಲಕ, ನಗದು, ಕೃತಿ ಗೌರವ ನೀಡಿ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಡಾ. ಜಿ. ಎನ್. ಉಪಾಧ್ಯ ವಿರಚಿತ 'ವಾತ್ಸಲ್ಯಪಥದ ರೂವಾರಿ-ವ್ಯಾಸರಾಯು ಬಲ್ಲಾಳ' ಕೃತಿಯನ್ನು ಅರವಿಂದ ಬಲ್ಲಾಳ ಮತ್ತು ಕುಸುಮ ಬಲ್ಲಾಳ ಲೋಕಾರ್ಪಣೆಗೈದರು. ಬಲ್ಲಾಳರ ಪುತ್ರಿ ಪೂರ್ಣಿಮಾ ಹೆಬ್ಬಾರ್ ಅನುವಾದಿಸಿರುವ ಬಲ್ಲಾಳರ 'ಅನುರಕ್ತೆ' ಕಾದಂಬರಿಯ ಆಂಗ್ಲಾನುವಾದವನ್ನು ಅಂದು ಬಿಡುಗಡೆಗೊಳಿಸಲಾಯಿತು. ವಿಭಾಗದ ಸಂಶೋಧನ ವಿದ್ಯಾರ್ಥಿ ಕಲಾ ಭಾಗ್ವತ್ ಅವರು 'ವಾತ್ಸಲ್ಯಪಥದ ರೂವಾರಿ-ವ್ಯಾಸರಾಯ ಬಲ್ಲಾಳ' ಕೃತಿಯನ್ನು ಪರಿಚಯಿಸಿದರು. 'ವ್ಯಾಸರಾಯ ಬಲ್ಲಾಳ ಪ್ರತಿಷ್ಠಾನ'ವು ಏರ್ಪಡಿಸಿದ್ದ 'ವ್ಯಾಸರಾಯ ಬಲ್ಲಾಳ ಕತಾ ಸ್ಪರ್ಧೆ'ಯ ವಿಜೇತರ ಹೆಸರುಗಳನ್ನು ತೀರ್ಪುಗಾರರಾದ ಮಿತ್ರಾ ವೆಂಕಟ್ರಾಜ್ ಅವರು ಘೋಷಿಸಿದರು.

'ಬಲ್ಲಾಳರ ಕನ್ನಡ ಕೈಂಕರ್ಯ' ವಿಷಯದ ಕುರಿತು ಕರ್ನಾಟಕ ಸಂಘ ಮುಂಬೈ ಇದರ ಅಧ್ಯಕ್ಷರಾದ ಡಾ. ಭರತ್ ಕುಮಾರ್ ಪೊಲಿಪು ಹಾಗೂ 'ಪತ್ರಕರ್ತರಾಗಿ ಬಲ್ಲಾಳರು' ಎಂಬ ವಿಷಯದ ಕುರಿತು ಮುಂಬೈ ಸಾಹಿತಿ, ಪತ್ರಕರ್ತ ಶ್ರೀನಿವಾಸ ಜೋಕಟ್ಟೆ ಅವರು ಉಪನ್ಯಾಸವನ್ನು ನೀಡಿದರು. 'ನಾನು ಕಂಡಂತೆ ಬಲ್ಲಾಳ' ಸಂವಾದ ಕಾರ್ಯಕ್ರಮದಲ್ಲಿ ಮುಂಬೈಯ ಹಿರಿಯ ಸಾಹಿತಿ, ಕಾದಂಬರಿಕಾರರಾದ ಮಿತ್ರಾ ವೆಂಕಟ್ರಾಜ್, ಡಾ. ಸುನೀತಾ ಶೆಟ್ಟಿ, ವ್ಯಾಸರಾಯ ಬಲ್ಲಾಳರ ಮಕ್ಕಳಾದ ಅರವಿಂದ ಬಲ್ಲಾಳ, ಪೂರ್ಣಿಮಾ ಹೆಬ್ಬಾರ್, ಅಂಜಲಿ ಅರುಣ್ ಮತ್ತಿತರರು ಪಾಲ್ಗೊಂಡರು. ಬಲ್ಲಾಳರ ಸಾಹಿತ್ಯ ಪ್ರಸ್ತುತಿಯನ್ನು ಅಹಲ್ಯಾ ಬಲ್ಲಾಳ್, ಮೋಹನ್ ಮಾರ್ನಾಡ್, ಅಂಜಲಿ ಅರುಣ್, ಕುಸುಮ ಬಲ್ಲಾಳ್, ನಳಿನಾ ಪ್ರಸಾದ್, ಸೂರಿ ಮಾರ್ನಾಡ್, ರಿತ್ವಿಕ್ ಬಲ್ಲಾಳ್, ಸುಶೀಲಾ ದೇವಾಡಿಗ ಮೊದಲಾದವರು ನೆರವೇರಿಸಿಕೊಟ್ಟರು.

ವಿವಿಧ ಕಾರ್ಯಕ್ರಮಗಳನ್ನು ನಡೆಸಿಕೊಟ್ಟ ಸರ್ವರಿಗೂ ಕೃತಿಯೊಂದಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಹಿರಿಯ ಸಾಹಿತಿ ಡಾ. ಜೀವಿ ಕುಲಕರ್ಣಿ, ಯಜ್ಞನಾರಾಯಣ ಸುವರ್ಣ, ಡಾ. ಉಮಾ ರಾಮರಾವ್, ನಗರದ ಇನ್ನಿತರ ಅನೇಕ ಗಣ್ಯರು, ಬಲ್ಲಾಳರ ಅಭಿಮಾನಿಗಳು ಅಧಿಕ ಸಂಖ್ಯೆಯಲ್ಲಿ ಉಪಸ್ಥಿತರಿದ್ದ ಈ ಕಾರ್ಯಕ್ರಮವು ವಿಭಾಗದ ಸಹಪ್ರಾಧ್ಯಪಕರಾದ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಅವರ ಸಂಯೋಜನೆಯಲ್ಲಿ ನಡೆಯಿತು. ಕಾರ್ಯಕ್ರಮದ ನಿರೂಪಣೆಯಲ್ಲಿ ಕಲಾ ಭಾಗ್ವತ್ ಅವರು ಸಹಕರಿಸಿದರು. ಭ್ರಾಮರಿ ಸುದ್ದಿ ವಾಹಿನಿಯ ಮುಖಾಂತರ ಕಾರ್ಯಕ್ರಮವನ್ನು ನೇರಪ್ರಸಾರ ಮಾಡಲಾಯಿತು.

**ವರದಿ : ಸವಿತಾ ಅರುಣ್ ಶೆಟ್ಟಿ**

## ಜಿ. ಆರ್. ಅಕದಾಸರಿಗೆ ಅಶೋಕಾ ಪ್ರಶಸ್ತಿ ಪ್ರದಾನ




ಕೇಂದ್ರ ಸರ್ಕಾರದ ಚಿಕ್ಕ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಮಂತ್ರಾಲಯದ ಹಿಂದಿನ ನಿರ್ದೇಶಕ ಮತ್ತು ಇದೇ ಮಂತ್ರಾಲಯದ ಅಭಿವೃದ್ಧಿ ಹಾಗೂ ಸುಗಮ ಕಾರ್ಯಾಲಯದ ಮಾಜಿ ನಿರ್ದೇಶಕರೂ ಆಗಿದ್ದ ಶಿರಸಿ ಮೂಲದ, ಪ್ರಸಿದ್ಧ ಅಕದಾಸ ಕುಟುಂಬದ ಗಣಪತಿ ಆರ್. ಅಕದಾಸ ಅವರಿಗೆ ಡಿಸೆಂಬರ್ 17, 2023ರಂದು ದಿಲ್ಲಿಯ ಇಂಡಿಯಾ ಹೆಬಿಟಾಟ್ ಸೆಂಟರ್‌ನಲ್ಲಿ ಪ್ರತಿಷ್ಠಿತ ಚಾರ್ಲ್ಸ್ ವಾಲ್ಟರ್ ಕೌನ್ಸಿಲ್ ಫಾರ್ ಇನ್ನೋವೇಶನ್ ಮತ್ತು ರಿಸರ್ಚ್ ಸಂಸ್ಥೆಯು ರಾಷ್ಟ್ರೀಯ ಅಶೋಕಾ ಪ್ರಶಸ್ತಿ ಪ್ರದಾನ ಮಾಡಿದೆ.

ಈ ಸಂಸ್ಥೆಯು ಸರ್ಕಾರಿ ಅಧಿಕಾರಿಗಳು, ವಕೀಲರು / ನ್ಯಾಯಾಂಗ ಅಧಿಕಾರಿಗಳು, ರಕ್ಷಣಾ ಇಲಾಖೆ ಅಧಿಕಾರಿಗಳು, ಪತ್ರಕರ್ತರು ಹಾಗೂ ಸಮಾಜದ ಗಣ್ಯರಿಗೆ ಅವರ ಸಾಧನೆಯನ್ನು ಗುರುತಿಸಿ ವಾರ್ಷಿಕವಾಗಿ ಕೊಡ ಮಾಡುವ ಈ ಪ್ರಶಸ್ತಿಯನ್ನು ಈ ಬಾರಿ ಜಿ.ಆರ್. ಅಕದಾಸರಿಗೆ ನೀಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಅರುಣಾಚಲ ಪ್ರದೇಶದ ಮಾಜಿ ಗವರ್ನರ್ ಮತ್ತು ಭಾರತೀಯ ಭೂಸೇನಾಧಿಕಾರಿಗಳ ಹಿಂದಿನ ಮುಖ್ಯಸ್ಥ ಜನರಲ್ ಜೆ.ಜೆ. ಸಿಂಗ್ ಅವರು ಹಲವು ಗಣ್ಯರ ಸಮ್ಮುಖದಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು.

'Havyaka Sandesha' January 2024

**_RNI NO. MAHBIL / 2000 / 746,_**
**_Postal Registration No. MCN/161/2024-2026_**
**_WPP License No. MR / Tech / WPP-130 / North / 2024-2026_**
**_'Licence to post without prepayment'_**

| | |
|---|---|
| ***Posted at Mumbai Patrika Channel Stg. Office Mumbai - 400 001***<br>**Date of Publication : 1st of every month** **REGISTERED NEWSPAPER** | **Date of Posting :**<br>**2nd, 3rd of every month** |
| ***If undelivered, please return to :***<br>**HAVYAKA WELFARE TRUST**<br>B-207, Valmiki Apts., Near Pharmacy College,<br>Sundar Nagar, Kalina, Vidyanagari P. O.,<br>Mumbai - 400 098.<br>**E-mail : havyakamumbai@hotmail.com**<br>**Visit : www.havyakamumbai.com**<br><br>Published by Narayan Akadas<br>for Havyaka Welfare Trust, Mumbai - 400 098.<br>being printed at M/s. Navin Printers, Mumbai - 400 016.<br>Hon. Editor : **Smt. Amita S. Bhagwat** | **To,** |






**Paduka pooja and seeking blessings of Shri Sansthan Shri Shri Shri Raghaveshwar Bharati Swamiji.**



**Havyaka Bhajana Mandali at Vittala Mandir, Dombivli (E)**

**Felicitation of Smt. Sharada Vijapure at Bhavani Foundation Programme.**

